## ಕೊಡಗು ಚೀಪ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

### ಜನರಲ್.

### ಇಸ್ತಿಹಾರ್ ನಾಮೆಗಳು.

ನಂ. 6. ತಾರೀಖು 10ನೇ ಜುಲೈ 1876.

ಮಡಿಕೇರಿ ಮ್ಯುನಿಸಿಪೆಲ್ ಇಲಾಖೆಗೋಸ್ಕರ ಏರ್ಪಡಿಸೋಣಾದ ಈ ಕೆಳಗೆ ಬರುವ ಬೈಲಾ ನಿಬಂಧನೆಗಳು ಚೀಫ್ ಕಮ್ಮಿಷನರವರಿಂದ ಮಂಜೂರ್ ಮಾಡಲ್ಪಟ್ಟು ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಸಲ್ಪಟ್ಟಿರುತವೆ.

"ಬಮೋಜೀಬ್ ಹುಕ್ಕುಂ."

T. Clarke,
*Offg. Secretary.*

### ಮಡಿಕೇರೆ ಮ್ಯುನಿಸಿಪೆಲ್ ಇಲಾಖೆಗೋಸ್ಕರ ಏರ್ಪಡಿಸಲ್ಪಟ್ಟ ಬೈಲಾ ನಿಬಂಧನೆಗಳು.

#### 1ನೇ ಅಧ್ಯಾಯ.

1. ಆಯಾ ತಿಂಗಳ ಮೊದಲನೇ ಸೋಮವಾರದ ದಿನ, ಮ್ಯುನಿಸಿಪೆಲ್ ಬೋರ್ಡಿನವರ ಸಾಮಾನ್ಯಸಮಾಜಗಳು ತಿಂಗಳು ತಿಂಗಳಿಗೂ ನಡೆಯುವದು.

2. ಜರೂರಾದಾಗಲೆಲ್ಲ ಮೇಲೆ ಕಂಡ ಸಾಮಾನ್ಯ ಸಮಾಜಗಳೊಡನೆ ವಿಶೇಷ ಸಮಾಜಗಳೂ ನಡೆಯುವವು.

3. ಕೊಡಗು ಸೂಪರಿಂಟೆಂಡೆಂಟರವರು ಬೋರ್ಡಿನ ಪ್ರೆಸೀಡೆಂಟರಾಗಿರುತ್ತಾರೆ. ಅವರ ಗೈರ್‌ಹಾಜರೀಯಲ್ಲಿ 1ನೇ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ಪ್ರೆಸೀಡೆಂಟರಾಗಿರತಕ್ಕದ್ದು, ಇವರಿಬ್ಬರೂ ಗೈರ್ ಹಾಜರಾದಲ್ಲಿ ಕಮಾಂಡಿಂಗ್ ಆಫಿಸರವರು ಪ್ರೆಸೀಡೆಂಟ್ ಕೆಲಸವನ್ನು ನೋಡತಕ್ಕದ್ದು. ಈ ಮೂವರೂ ಇಲ್ಲದಿದ್ದರೆ, ಸೇರಿದ ಸಮಾಜದವರು ತತ್ಕಾಲಕ್ಕೆ ತಮಗೆ ಯುಕ್ತವಾದವರನ್ನು ಪ್ರೆಸೀಡೆಂಟರಾಗಿ ಯೇರ್ಪಡಿಸಿಕ್ಕೊಳ್ಳತಕ್ಕದ್ದು.

ಒಂದು ಸಮಾಜದಲ್ಲಿ ಚರ್ಚಿಸಲ್ಪಡತಕ್ಕ ದರೋಬಸ್ತು ಅಂಶಗಳೂ ಸಮಾಜ ಸೇರುವದಕ್ಕೆ ಅಥವ ಪಕ್ಷ ಯೇಳು ದಿನಗಳಿಗೆ ಮುಂದಾಗಿ ಕೊಡೋಣಾದ ಒಂದು ಸರ್‍ಕ್ಯುಲರ್ ಮೂಲಕ ಮೆಂಬರ್‌ಗಳ ತಿಳುವಳಿಕೆಗೆ ತರಲ್ಪಡತಕ್ಕವು.

4. ಹಾಜರಿರುವ ಯಾವ ಮೆಂಬರಾಗಲಿ, ಹುಕ್ಕುಮಾಗತಕ್ಕ ಯಾವ ಅಂಶವನ್ನಾದರೂ, ಪ್ರೆಸೀಡೆಂಟರಿಗೆ ಕಳುಹಿಸಬಹುದು.

5. ಯಾವ ವಿಷಯವನ್ನಾದರೂ ಸೂಚಿಸುವಲ್ಲಿ ಯಾ ಚರ್ಚಿಸುವಲ್ಲಿ ಪ್ರತಿಮೆಂಬರೂ, ತನ್ನ ಜಾಗಾದಲ್ಲಿದ್ದುಕೊಂಡು ಯಾವಾಗಲೂ ಪ್ರೆಸೀಡೆಂಟರನ್ನುದ್ದೇಶಿಸಿ ಮಾತನಾಡತಕ್ಕದ್ದು.

6. ಜವಾಬಾಗಿ ಸೂಚಿಸತಕ್ಕವನು ವಿನಾ, ಯಾವ ಮೆಂಬರೂ, ಯಾವ ಸೂಚನೆ ಯಾ ತಿದ್ದುಪಾಟನ ವಿಷಯದಲ್ಲಿಯೂ, ಯೆರಡಾವರ್ತಿ ಮಾತನಾಡಕೂಡದು.

7. ಯಾವ ಅಂಶವನ್ನಾಗಲಿ ಸೂಚಿಸಿದವನು ಅಂಗೀಕಾರಪಟ್ಟವರ ಪಟ್ಟೀ ಬೇಕೆಂದು ಕೇಳಿದರೆ ಕೈಗಳೆತ್ತಿ ತೋರಿಸುವದರ ಮೂಲಕ ಅಂಗೀಕಾರಗಳನ್ನು ತೆಗೆದು ಕೊಳ್ಳತಕ್ಕದ್ದು.

8. ಪ್ರತಿ ಸೂಚನೆ ಅಥವಾ ತಿದ್ದುಪಾಡು ಬರವಣಿಗೆ ಯಲ್ಲಿರತಕ್ಕದ್ದು; ಆದರೆ ಪ್ರೆಸೀಡೆಂಟರಿಂದ ಅಪೇಕ್ಷಿಸಲ್ಪಟ್ಟ ಹೊರತ ಸೂಚನೆ ಯಾ ತಿದ್ದುಪಾಡು ಅನುಮೋದಿಸಲ್ಪಡ ಬೇಕಾದ ಆವಶ್ಯಕವಿಲ್ಲವು.

9. ಒಬ್ಬ ಮೆಂಬರಿಂದ ಮತ್ತೊಬ್ಬ ಮೆಂಬರಿಗೆ ಹಾಕಲ್ಪಡುವ, ಸಮಾಜದ ಕೆಲಸಕ್ಕೆ ಸಂಬಂಧಪಟ್ಟ ದರೋಬಸ್ತು ಪ್ರಶ್ನೆಗಳೂ ಪ್ರೆಸೀಡೆಂಟರ ಮೂಲಕವೇ ಹಾಕಲ್ಪಡತಕ್ಕವು.

10. ಮ್ಯುನಿಸಿಪೆಲ್ ಬೋರ್ಡಿನವರ ಸಮಾಜಗಳಲ್ಲಿ ಸಾಮಾನ್ಯವಾಗಿ ಜನಗಳು ಬರಬಹುದು, ಆದರೆ ಜರೂರಿದ್ದಲ್ಲಿ ಹೊರಗಿನವರನ್ನು ಹೊರಗೆ ಹೋಗುವಂತೆ ಹೇಳಬಹುದು.

11. ದರೋಬಸ್ತು ಸಮಾಜಗಳಲ್ಲಿಯೂ, ರೈತರು ಹಾಜರಿದ್ದು ಕೇಳಿದ ಯಾವ ಲೆಕ್ಕವನ್ನಾಗಲಿ ಹಾಜರ್ ಮಾಡತಕ್ಕದ್ದು.

12. ಕಟ್ಟಡದ ಬಗ್ಗೆ, ಯಾ ಇತರ ಕೆಲಸಗಳಿಗಾಗಿ ಮ್ಯುನಿಸಿಪೆಲ್ ಸರಹದ್ದುಗಳೊಳಗೆ, ಸಾಗುವಳೀಯಲ್ಲಿರುವ ಯಾ ಇತರ ವಿಧವಾಗಿರುವ ಜಮೀನನ್ನು ಕ್ರಯಕ್ಕಾಗಲಿ ಗೇಣೀಗಾಗಲಿ ಪಡೆಯಲಿಕ್ಕೆ ಅಪೇಕ್ಷೆಯುಳ್ಳ ಯಾವ ಮನುಷ್ಯನಾಗಲಿ ಖಾಯಿಷ್ಮಾಡಿದ ಜಮೀನ್ ಇರುವ ಪ್ರದೇಶವನ್ನೂ; ಅದರ ವಿಸ್ತಾರವನ್ನೂ ವಿವರಿಸುವಂತಾ ನಕ್ಷೇಗಳ ಯೆರಡು ಪ್ರತಿಗಳು ನಿಶೀ, ಬರವಣಿಗೇ ಮೂಲಕವಾದ ದರಖಾಸ್ತನ್ನು ಪ್ರೆಸೀಡೆಂಟರಿಗೆ ಪರಭಾರೆ ಕೊಡತಕ್ಕದ್ದು.

ಪ್ರೆಸೀಡೆಂಟರ ಮಂಜೂರಾತೀಯನ್ನು ಮೊದಲೇ ಪಡೆದ ಹೊರತು ಯಾವ ಮನುಷ್ಯನೂ, ತಾನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಖರೀದಿಗೆ ಪಡೆದುಕೊಂಡ ಜಮೀನಿನಲ್ಲಿ ಕಟ್ಟಡ ಕಟ್ಟಿಸಲಿಕ್ಕೆ ಪ್ರಾರಂಭಿಸಲು ಅಧಿಕಾರವಿಲ್ಲವು.

ಮ್ಯುನಿಸಿಪೆಲ್ ಇಲಾಖೆಯವರಿಗೆ ಸೇರಿದ ಬಂದೇ ಜಮೀನಿಗಾಗಿ ಒಂದು ತಿಂಗಳೊಳಗೆ ಯೆರಡು ಅಥವಾ ಹೆಚ್ಚು ದರಖಾಸ್ತುಗಳು ಬಂದರೆ ಅವ್ವಲ್ ಖರೀದೀ ಠರಾವ್‌ನಿಂದ ಮೂರುವಾರಗಳ ವರಿಗೆ ಬಹಿರಂಗಗಳಾದ ಸ್ಥಳಗಳಲ್ಲಿ ನೋಟಿಸ್‌ಗಳನ್ನು ಹಚ್ಚುವದರ ಮೂಲಕ ಫೆಯಿಷ್ ಮಾಡಿದ ಮೇಲೆ ಪ್ರಕಟವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

13. ಮ್ಯುನಿಸಿಪೆಲ್ ಇಲಾಖೆಯವರಿಗೆ ಸೇರಿದ ಜಮೀನನ್ನು ಗೇಣೀಗಾದಲಿ, ಖರೀದೀಗಾಗಲಿ ಪಡೆದುಕೊಳ್ಳುವ ಬಗ್ಗೆ ಬರುವ ಯಾವ ದರಖಾಸ್ತನ್ನಾಗಲಿ, ಪ್ರೆಸೀಡೆಂಟರು ದರಖಾಸ್ತುದಾರರಿಗೆ ತಕ್ಕ ಸಬಬ್‌ಗಳು ತಿಳಿಸಿ ನಿರಾಕರಿಸಬಹುದು. ಅಥವಾ ಷರತ್ತುಗಳ ಪೈಕೀ ಕಟ್ಟಡಗಳು, ಹೊರಗಿನ ಕಟ್ಟಡಗಳು, ಸುತ್ತು ಗೋಡೆಗಳು, ಯಾ ಆವರಣಗಳು, ಫಲಾನೇ ವಿಧವಾಗಿ ಯಾ ಫಲಾನೇ ಖರೀದೀ ಉಳ್ಳದ್ದಾಗಿರಬೇಕೆಂತಲೂ, ಹರಾಜ್ ಯಾ ಗೇಣೀಕಾಲದಲ್ಲಿ ನಿಷ್ಕರ್ಷೆಯಾಗತಕ್ಕಂತಾ ಕಾಲದೊಳಗಾಗಿ ಕಟ್ಟಲ್ಪಡತಕ್ಕದ್ದೆಂತಲೂ, ಇದಕ್ಕೆ ತಪ್ಪಿದರೆ ಯೆರಡು ವರುಷಗಳೊಳಗಾಗಿ ಸರ್ಕಾರಕ್ಕೆ ವಾಪಸ್ ಸೇರಿಸಿಕೊಳ್ಳಲ್ಪಡುವದೆಂತಲೂ, ಒಂದು ಷರತ್ ಮಾಡಬಹುದು.

14. ಹಾಲೀ ಇರುವ ಕಟ್ಟಣದ ಜಮೀನ್‌ಗಳು, ಯಾ ನಿವೇಶನಗಳು, ಯಾ ಅಂಗಡಿಗಳು ಪ್ರೆಸೀಡೆಂಟರ ಮಂಜೂರಾತೀ ಇಲ್ಲದೆ ವಿಭಾಗವಾಗತಕ್ಕದ್ದಲ್ಲವು.

15. ಬೀದಿಗಳಲ್ಲಿ ಅಥವಾ ಸಂದಿಗಳಲ್ಲಿ ಐದು ವರುಷಗಳ ಕಾಲ ವಾಸಸ್ಥರಿಲ್ಲದೆ ಬಿಡಲ್ಪಟ್ಟ ಯಾವ ನಿವೇಶನಗಳಾಗಲಿ ಮನೆಗಳು ಮುಂತಾದವುಗಳಾಗಲಿ, ಆರು ತಿಂಗಳವರಿಗೆ ಇಸ್ತಿಹಾರ್ ಫೆಯಿಷ್ ಆದಮೇಲೆ ಪ್ರೆಸೀಡೆಂಟರ ಅಧಿಕಾರಕ್ಕೆ ಒಳಗಾಗಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡಲಿಕ್ಕೆ ಗುರಿಯಾಗಿರುತ್ತವೆ. ಅಂತಾ ಹರಾಜ್‌ನಲ್ಲಿ ಹುಟ್ಟುವಳೀಯಾದ ಮೊಬಲಗಿಗೆ ಯಾರೂ ಬಾಧ್ಯತೆ ತಾರದೆ ಇದ್ದರೆ ಅದು, ಬೇವಾರಸ್ ಸ್ವತ್ತಿನ ನಿಬಂಧನೆಗಳ ಪ್ರಕಾರ ಮ್ಯುನಿಸಿಪೆಲ್ ಇಲಾಖೆಯ ಜಮೀನಿಗೆ ದಾಖಲ್ ಮಾಡಿಕೊಳ್ಳಲ್ಪಡುವದು.

16. ಸ್ಕ್ವಾಟರ್‌ಗಳು ಅಂದರೆ ದೃಢವಾದ ಬಾಧ್ಯತೆ ಯಿಲ್ಲದೆ ಪಬ್ಲಿಕ್ ಜಮೀನ್‌ನಲ್ಲಿ ನೆಲೆಗೊಳ್ಳುವ ಜನಗಳು, ಇದುವರಿಗೆ ವಾಸಮಾಡುತ್ತಿದ್ದ ಮನೆ ಮುಂತಾದವುಗಳನ್ನು ಒಳಗೊಂಡಿದ್ದ ಹಾಳು ಗೋಡೆಗಳು, ಸದರೀ ಮನೆ ಮುಂತಾದವುಗಳು ಖಾಲೀ ಮಾಡಲ್ಪಟ್ಟ ತರುವಾಯ ಕೆಡಹಿಸಿ ನೆಲ ಸಮಮಾಡಲ್ಪಡತಕ್ಕವು. ಅಂತಾ ಸಂಗತಿಗಳಲ್ಲಿ ಹಾಂಗೆ ಖಾಲೀ ಮಾಡಲ್ಪಟ್ಟ ಜಮೀನು ಮ್ಯುನಿಸಿಪೆಲ್ ಯಿಲಾಖೆಯವರ ಅಧೀನದಲ್ಲಿರತಕ್ಕದ್ದು.

II. ಪೂರ್ವ ಅನುಭವಿಸುತ್ತಿದ್ದ ಬಾಧ್ಯತೆಯ ಮೇಲೆ ಸ್ಕ್ವಾಟರ್‌ಗಳಿಂದ ಯಾ ಇತರ ಜನಗಳಿಂದ ತ್ಯಜಿಸಲ್ಪಟ್ಟ ನಿವೇಶನಗಳ, ಪಾಳು ಭೂಮಿಯು, ಯಾ ವಾಸಯೋಗ್ಯವಲ್ಲದೆ ಶಿಥಿಲವಾಗಿರುವ ಮನೆ ಮುಂತಾದವುಗಳ ಯಾವ ಬಿಕರೀಯೂ, ಪಟ್ಟೇ ಇಂದ ಯಾ ಗ್ರಾಂಟ್ ನಿಂದ ಯಾ ಸರ್ 1864ನೇ ಇಸವೀ ಜುಲೈ ಗುರ್ರೇ ಮೊದಲು ಹುಟ್ಟಿದ ಕ್ರಯ ಶಾಸನದಿಂದ ಮತ್ತು ಸದರೀ ಜಮೀನಿನ ವಿವರಣದಿಂದ ಅಂತಾ ಬಾಧ್ಯತೆಯು ಬಲಪಡಿಸಲ್ಪಟ್ಟ ಹೊರ್ತು ದೃಢಪಡತಕ್ಕದ್ದಲ್ಲ.

III. ಇದು, ಒಂದು ತಿಂಗಳೊಳಗೆ ತಮ್ಮ ಮನೆಗಳನ್ನ ದುರಸ್ತು ಮಾಡುವ ಯಾ ಅವುಗಳನ್ನ ಖಾಲೀ ಮಾಡುವ ಜನಗಳಿಗೆ ಅಥವಾ ವಾಸಗೃಹ ಮುಂತಾದವುಗಳನ್ನು ಮಾರುವ ಜನಗಳಿಗೆ ಲಗಾವಾಗುವದಿಲ್ಲ.

17. ದರೋಬಸ್ತು ಬಂಡಿಗಳೂ, ಸವಾರಿಗಳೂ ತಮ್ಮ ಯೆದುರಿಗೆ ಬರತಕ್ಕ ಬಂಡಿಗಳು, ಸಂಧಿಸಿ ಬಲಗಡೆಗೆ ಹೋಗುವದಕ್ಕೆ ಅನುಕೂಲಿಸುವಂತೆ ರಸ್ತೆಯಲ್ಲಿ ತಮ್ಮ ಯಡಪಾರ್ಶ್ವಕ್ಕೇನೇ ಹೋಗುವಂತೆ ಬಲಾತ್ಕರಿಸಲ್ಪಡ ತಕ್ಕವು.

18. ಸಾಮಾನುಗಳು ತೆಗದುಕೊಂಡು ಹೋಗುವ ಬಗ್ಗೆ ಯೆತ್ತುಗಳು ಕಟ್ಟಿದ ಬಂಡೀ ಅಲ್ಲದ ಇತರ ಯಾವ ವಿಧವಾದ ಯಾವ ಸಾಧನವನ್ನಾಗಲಿ ಸೂರ್ಯಾಸ್ತಮಯದನಂತರ ಮುಕ್ಕಾಲು ಗಂಟೆಗೂ ಸೂರ್ಯೋದಯಕ್ಕೆ ಪೂರ್ವ ಒಂದು ಗಂಟೆಗೂ ಮಧ್ಯ ಕಾಲದಲ್ಲಿ ಯಾವಾಗಲಾದರೂ ಅಂತಾ ಗಾಡಿಯ ಉಭಯ ಪಾರ್ಶ್ವಕ್ಕೂ ಹಚ್ಚಿದ ದೀಪಗಳು ಇಡದೇ ಯಾವನು ನಡಿಸುತ್ತಾ

ನೋ ಅಂತಾವನು ದೀಪಗಳು ಅನಾವಶ್ಯಕವಾಗಲಿಕ್ಕೆ ಸಾಕಾದಷ್ಟು ಬೆಳದಿಂಗಳು ಇರಬಹುದಾಗಿ ಮೆಜಿಸ್ಟ್ರೇಟರಿಗೆ ತೋರಿದಾಗ ಹೊರ್ತು ಇತರ ಕಾಲದಲ್ಲಿ 5ರೂಪಾಯಿಗಳಿಗೆ ಮೀರದ ಜುರ್ಮಾನೆಗೆ ಗುರಿಯಗತಕ್ಕದ್ದು.

II. ಮ್ಯುನಿಸಿಪೆಲ್ ಸರಹದ್ದಿನೊಳಗೆ ಯಾವ ರಸ್ತೆಯಲ್ಲಿಯಾದರೂ ರಾತ್ರಿ 7 ಗಂಟೆಗೂ ಬೆಳ್ಗ್ಯೆ 4 ಗಂಟೆಗೂ ಮಧ್ಯೆ ಯೆತ್ತುಗಳು ಕಟ್ಟಿದ ಬಂಡಿಯನ್ನಾಗಲಿ, ಯಾವ ವಿಧವುಳ್ಳ ಸವಾರೀ ಗಾಡಿಯನ್ನಾಗಲಿ ಅಂತಾ ಗಾಡಿಯ ಉಭಯಪಾರ್ಶ್ವಕ್ಕೂ ಲಗತ್ ಮಾಡಲ್ಪಟ್ಟ ಹಚ್ಚಿದ ಲಾಂದರುಗಳು ಕಟ್ಟದೇ ನಡಸುವಂತಾವನು 5ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು. ಪರಂತು ಕಾಲು ನಡೆಗೆ ಸರಿಯಾಗಿ ಹೋಗುವ ಭರ್ತೀ ಬಂಡಿಗಳಿಗೆ ಮಧ್ಯದಲ್ಲಿ ತಗಲಹಾಕಲ್ಪಟ್ಟ ಒಂದು ಹಚ್ಚಿದ ಲಾಂದ್ರ ಯಿರಬಹುದು.

III. ಮ್ಯುನಿಸಿಪೆಲ್ ಸರಹದ್ದಿನಲ್ಲಿ ಯೆತ್ತುಗಳು ಕಟ್ಟಿದ ಯಾವ ಸಾಮಾನು ಬಂಡಿಯನ್ನಾಗಲಿ ನಡಿಸುವಂತವನು ಕಾಲು ನಡೆಗೆ ಸರಿಯಾಗಿ ನಡಿಸತಕ್ಕದ್ದು ಮತ್ತು ರಸ್ತೆಯೊಳಗೆ ಯೆಡಗಡೆಯಲ್ಲಿಯೇ ಹೋಗತಕ್ಕದ್ದು, ಮತ್ತು ಯೆತ್ತುಗಳನ್ನು ನಡಿಸತಕ್ಕವನು ಅವುಗಳನ್ನು ಸಂಪೂರ್ಣವಾಗಿ ತನ್ನ ಹತೋಟೀಯಲ್ಲಿಟ್ಟುಕೊಳ್ಳುವ ಬಗ್ಯೆ ಸಾಕಾದಷ್ಟು ಬಲವಾದ ಹಗ್ಗದಿಂದ ಆ ಯೆತ್ತುಗಳಿಗೆ ಮೂಗುದಾರ ಹಾಕಿರತಕ್ಕದ್ದು. ಈ ಹುಕ್ಕುಂಗಳಿಗೆ ಬರಕಿಲಾಫ್ ನಡೆಯುವ ತಪ್ಪಿತಸ್ಥನು 5 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

## 2ನೇ ಅಧ್ಯಾಯ.

### ಸ್ಥಳಿಕ ತೊಂದರೆಗಳು.

19. ಪಬ್ಲಿಕ್ ಬೀದಿಗಳಲ್ಲಿ ದನಗಳನ್ನು ಕಟ್ಟುವಿಕೆ, ಪೆಟ್ಟಿಗೆಗಳನ್ನು ಖಾಲೀ ಬಂಡಿಗಳನ್ನು, ಯಾ ಸವಾರೀಗಾಡಿಗಳನ್ನು ಅಥವಾ ಯಾವವಿಧದ ನಿರೋಧಗಳನ್ನು ಮನೆಗಳ ಯಾ ಅಂಗಡಿಗಳ ಮುಂದೆ ಬಿಡುವಿಕೆ, ಮತ್ತು ಯಾವ ಅಂಗಡಿಯ ಯಾ ಮನೆಯ ಮುಂದುಗಡೆಯಾಗಲಿ ಯೆರಡು ಗಂಟೆಗಳ ಹೊತ್ತಿಗಿಂತ ಹೆಚ್ಚಾಗಿ ಬಂಡಿಗಳು ಯಾ ಸವಾರೀಗಾಡಿಗಳು ಭರ್ತೀ ಮಾಡುವಾಗ್ಯೆ ಯಾ ಯಿಳಿಸುವಾಗ್ಯೆ ಗುಂಪುಕೂಡುವದಕ್ಕೆ ಆಸ್ಪದ ಕೊಡುವಿಕೆ, ಇಂತಾದ್ದು 5ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

20. ಮ್ಯುನಿಸಿಪೆಲ್ ಇಲಾಖೆಯವರ ಅಪ್ಪಣೆ ಯಿಲ್ಲದೆ, ಯಾ ಅವರ ಹುಕ್ಕುಮಿಗೆ ವಿರುದ್ಧವಾಗಿ ಬಂಡೆಯಲ್ಲಿ ಗ್ರೇವಲ್ ಮತ್ತು ಕಲ್ಲು ತೆಗೆಯುವಿಕೆ, ಇಟ್ಟಿಗೆ ಮತ್ತು ಹೆಂಚುಗಳಿಗೋಸ್ಕರ ಮಣ್ಣು ಅಗಿಯುವಿಕೆ ಇಟ್ಟಿಗೆ ವ ಹೆಂಚುಗಳನ್ನು ಮಾಡುವ ಬಗ್ಯೆ ಲೈಸೆನ್ಸಗಳನ್ನು ಮ್ಯುನಿಸಿಪೆಲ್ ಆಫಿಸ್‌ನಲ್ಲಿ ದರಖಾಸ್ತು ಮಾಡಿ ಪಡೆದುಕೊಳ್ಳಬಹುದು. ಈ ಸ್ಥಳವೊಳಗೆ ತರಲ್ಪಡುವ ಇಟ್ಟಿಗೆಗಳಿಗೆ 1000ಕ್ಕೆ 4 ಆಣಿ, ಹೆಂಚುಗಳು 1000ಕ್ಕೆ 4 ಆಣಿ, ಈ ಮೇರೆ ವಸೂಲ್ ಮಾಡಲ್ಪಡತಕ್ಕದ್ದಲ್ಲದೆ, ಒಂದು ಬಂಡಿ ಕಲ್ಲಿಗೆ 6 ಕಾಸು ಅಥವಾ ಚದರ ಗಜ ಒಂದಕ್ಕೆ 2 ಆಣಿಗಳ ಮೇರೆ ತೆರಿಗೆ ವಸೂಲ್ ಮಾಡಲ್ಪಡತಕ್ಕದ್ದು.

21. ನೋಟಿಸ್ ತಲಪಿದ 8 ದಿನಗಳೊಳಗಾಗಿ ಯಾವ ಮನೆಗಾಗಲಿ ಕಟ್ಟಕ್ಕಾಗಲಿ, ಹೊರಗೆ ಯಾ ಒಳಗೆ ಸುಣ್ಣ ಬಳಿಯಲಿಕ್ಕೆ ಅಥವಾ ಆರೋಗ್ಯ ನಿಮಿತ್ತದಿಂದ ಅವುಗಳನ್ನು ಪಾಕ್ ಮಾಡಲಿಕ್ಕೆ, ಅಥವಾ ಪಾಯಖಾನೆಗಳನ್ನು ಯಾ ಬಚ್ಚಲು ಗುಣಿಗಳನ್ನು ಕಂಪು ಯಿಲ್ಲದೆ ಮಾಡಲಿಕ್ಕೆ ಮೆಡಿಕೆಲ್ ಆಫಿಸರರ ಸಲಹೇ ಮೇಲೆ ಅಮಲ್ ನಡಿಸುವ ಪ್ರೆಸಿಡೆಂಟರ ಯಾವ ಹುಕ್ಕುಮಿಗಾಗಲಿ ಅವಿಧೇಯವಾಗಿ ನಡೆಯುವಿಕೆ—ಜುರ್ಮಾನೆ 10 ರೂಪಾಯಿ.

22. ಗ್ಲಾಂಡರ್ಸ್ ಯೆಂಬ ರೋಗವಾಗಲಿ, ಅಥವಾ ಅಪಾಯುಕರವಾದ ಯಾ ಅಂಟುವ ಸ್ವಭಾವವುಳ್ಳ ಸಾಂಕ್ರಾಮಿಕವಾದ ಯಾ ಅನ್ಯಥಾ ಯಿರುವ ಯಾವ ರೋಗವಾಗಲಿ, ತಗಲಿದ, ಯಾವದಾದರೂ, ಕುದುರೆ ಯಾ ಯಿತರ ಜಾನವರ್‌ಗಳುಳ್ಳ, ಮತ್ತು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಹಂಗಾಮಿಯಾಗಿ ಆಗಲಿ, ಅನ್ಯಥಾ ಆಗಲಿ, ವಾಸ ಮಾಡುವ ದರೋಬಸ್ತು ಜನಗಳೂ ಆ ಸಂಗತಿಯನ್ನು ಕುರಿತು ಕೂಡ್ಲೆ ಪ್ರೆಸಿಡೆಂಟರಿಗೆ ಜಾಹಿರ್ ಮಾಡುವಂತೆ ತಾಕೀದ್ ಮಾಡಲ್ಪಡತಕ್ಕದ್ದು. ಸದರೀ ಪ್ರೆಸಿಡೆಂಟರು ಮೇಲೆ ಕಂಡ ಪ್ರಕಾರ ತಮಗೆ ನೋಟಿಸ್ ಬಂದ ಮೇಲೆ ಸಾಧ್ಯವಾದಷ್ಟು ತ್ವರೆಯಾಗಿ ಲಾಯಖಾದ ಒಬ್ಬ ಸಾಲಂತ್ರೀ ಮೂಲಕ ಜಾನವರನ್ನು ಯಾ ಜಾನವರ್‌ಗಳನ್ನು ಅಜಮಾಯಿಷೀಮಾಡಿಸಿ, ಸದರೀ ಜಾನವರ್ ಯಾ ಜಾನವರ್‌ಗಳನ್ನು ತೊಲಗಿಸುವದು ಆವಶ್ಯಕವೆಂದು ತೃಪ್ತಿಕರವಾಗಿ ತಿಳಿಯಬಂದರೆ, ಸ್ವಂತಗಾರನು ಅಂತಾ ಜಾನವರನ್ನು ಕೂಡ್ಲೆ ಮ್ಯುನಿಸಿಪೆಲ್ ಸರಹದ್ದುಗಳ ಆಚೆ ಸಾಗಿಸಿ ಬಿಡುವಂತೆ ತಾಕೀದ್ ಮಾಡಲ್ಪಡತಕ್ಕದ್ದು

ಗ್ಲಾಂಡರ್ಸ್ ಎಂಬ ರೋಗವಾಗಲಿ, ಯಿತರ ಯಾವ ಸಾಂಕ್ರಾಮಿಕ ರೋಗವಾಗಲಿ, ತಗಲಿ ಯಿರುವ ಜಾನವರ್‌ಗಳು ಉಳ್ಳ ಯಾವ ಮನುಷ್ಯನಾಗಲಿ, ಈ ಬೈಲಾ ನಿಬಂಧನೇ ಪ್ರಕಾರ ನಡೆಯದಿದ್ದರೆ, ಅಂತಾವನು ಒಬ್ಬ ಮೆಜಿಸ್ಟ್ರೇಟರ ಮುಂದೆ ತಪ್ಪು ಸ್ಥಾ

ಪಿಸಲ್ಪಟ್ಟ ಅವ್ವಲ್‌ದಫಾ ತಪ್ಪಿತಕ್ಕೆ 100 ರೂಪಾಯಿಗಳ, ಆ ತರುವಾಯ ಯರಡನೇ ಮತ್ತು ಪ್ರತಿಸಲದ ತಪ್ಪಿತಕ್ಕೂ, 200 ರೂಪಾಯಿಗಳ ಜುರ್ಮಾನೆಗೆ ಗುರಿಯಾಗತಕ್ಕದ್ದು.

23. ಸ್ವಂತಗಾರರ ಯಾ ಹಿಡುವಳೀದಾರರ ಮನೆ ಮುಂತಾದವುಗಳಲ್ಲಿ ಮೃತಪಡುವ ಯಾವ ಜಂತುವಿನ ಶವವನ್ನಾಗಲಿ, ಯುಕ್ತವಾದ ಕಾಲದೊಳಗೆ, ರಬ್ಬಿಷ್ ಡಿಪೋಯೆಂಬ ಕಶ್ಮಲ ಹಾಕುವ ಜಾಗಾಕ್ಕೆ ಸತ್ತ ಅಥವಾ, ಜಂತುಗಳ ಶರೀರಗಳನ್ನು ದರ್ಫ ಮಾಡುವ ಬಗ್ಯೆ ಪ್ರತ್ಯೇಕವಾಗಿ ಯೇರ್ಪಡಿಸಲ್ಪಟ್ಟ ಸ್ಥಳಕ್ಕೆ ತೆಗಸಿ ಹಾಕುವದಕ್ಕೆ ಉಪೇಕ್ಷಿಸುವಿಕೆ,—ಜುರ್ಮಾನೆ 5 ರೂಪಾಯಿಗಳು.

24. ಪಬ್ಲಿಕ್ ತೋಟಗಳಲ್ಲಿ ಯಾ ರಸ್ತೆಗಳ ಬಾಜೂಗಳಲ್ಲಿ ಮರಗಳನ್ನು ನಾಶಪಡಿಸುವಿಕೆ, ಹಣ್ಣುಗಳನ್ನು ಯಾ ಹುವ್ವುಗಳನ್ನು ಕೊಯ್ಯುವಿಕೆ, ಯಾ ಹುಲ್ಲನ್ನು ಕೊಯ್ಯುವಿಕೆ, ಯಾ ಬೇರುಸಹಿತ ಕೀಳುವಿಕೆ, ಅಥವಾ ಯಾವ ವಿಧದಿಂದಲಾಗಲಿ, ರಸ್ತೆಗಳ ಬಾಜೂಗಳನ್ನು ಮತ್ತು ಬದುವುಗಳನ್ನು ನಾಶಪಡಿಸುವಿಕೆ, ಅಥವಾ ಕವಾಯತ್ ಜಾಗಾಗಳಲ್ಲಿ, ಯಾ ವಿಹಾರಾಪೇಕ್ಷೆಯುಳ್ಳವರಿಗಾಗಿ ಮಾತ್ರ ಉದ್ದೇಶಿಸಲ್ಪಟ್ಟ ಪಬ್ಲಿಕ್ ತೋಟಗಳಲ್ಲಿ ತಿರುಗಾಡಿ ರಾಪ್ತೆ ಮಾಡುವಿಕೆ,—ಜುರ್ಮಾನೆ 10 ರೂಪಾಯಿಗಳು.

25. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಯಿಟ್ಟಿಗೆಯಿಂದ ಯಾ ಕಲ್ಲಿನಿಂದ ಕಟ್ಟಲ್ಪಟ್ಟ ಯಾವ ಗೋರೀಯಲ್ಲಾಗಲಿ, ಶವದ ಪೆಟ್ಟಿಗೆಯನ್ನೂ ಯಾ ಶವವನ್ನೂ, ಭೂಮಿಯ ಮಟ್ಟದಕೆಳಗೆ ಮೂರು ಅಡಿಗಿಂತ ಕಡಮೆಯಾದ ಆಳದಲ್ಲಿರುವ ಹಾಗೆ ದರ್ಫ ಮಾಡುವಿಕೆ.—ಜುರ್ಮಾನೆ 5 ರೂಪಾಯಿ.

26. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಭೂಮಿಯಲ್ಲಾಗಲಿ, ಇಟ್ಟಿಗೆಯಿಂದ ಯಾ ಕಲ್ಲಿನಿಂದ ಕಟ್ಟಲ್ಪಡದೇ ಯಿರುವ ಯಾವ ಗೋರೀಯಲ್ಲಾಗಲಿ, ಯಾವ ಶವದ ಪೆಟ್ಟಿಗೆಯನ್ನಾಗಲಿ, ಶವವನ್ನಾಗಲಿ, ಭೂಮಟ್ಟದ ಕೆಳಗೆ 5 ಅಡಿಗಳಿಗೆ ಕಡಮೆಯಾದ ಆಳದಲ್ಲಿರುವಂತೆ ದರ್ಫ ಮಾಡುವಿಕೆ.—5 ರೂಪಾಯಿಗಳ ಜುರ್ಮಾನೆ.

27. ಮ್ಯುನಿಸಿಪೆಲ್ ಸರಹದ್ದುಗಳೊಳಗೆ ಯಿರುವ ಯಾವ ದರ್ಫ ಜಾಗಾದಲ್ಲಾಗಲಿ, ಎರಡು ಅಡಿಗೆ ಕಡಮೆಯಾದ ದೂರದಲ್ಲಿ ಮತ್ತು ಮ್ಯುನಿಸಿಪೆಲ್ ಬೋರ್ಡಿನವರಿಂದ ವಿಧಿಸಲ್ಪಡದ ಜಾಬಿನಲ್ಲಿ ದರ್ಫ ಮಾಡುವಿಕೆ,—5 ರೂಪಾಯಿಗಳ ಜುರ್ಮಾನೆ.

28. ದರ್ಫ ಜಾಗಾಗಳ ಯಾ ದಹನ ಸ್ಥಳಗಳ ಸ್ವಂತಗಾರರು ಯಾ ಜಿಮ್ಮೆಯುಳ್ಳವರು ದರ್ಫ ಯಾ ದಹನವಾದ 24 ಘಂಟೆ ಹೊತ್ತಿನ ಒಳಗಾಗಿ, ಮೃತಪಟ್ಟ ಮನುಷ್ಯನ ಹೆಸರುಗಳು, ಸ್ತ್ರೀ ಅಥವಾ ಪುರುಷನೆಂಬದು, ವಯಸ್ಸು, ಮತ್ತು ವಾಸಸ್ಥಾನ, ಮರಣಕಾರಣ, ಯಿಂತಾದ್ದನ್ನು ಕುರಿತು ಆ ಜನಗಳಿಗೆ ಸಾಧ್ಯವಾದ ದರೋಬಸ್ತು ಸಂಗತಿಯನ್ನೂ ಬೋರ್ಡಿನವರಿಗೆ ತಿಳಿಸಲಿಕ್ಕೆ ಉಪೇಕ್ಷಿಸುವಣ,—ಜುರ್ಮಾನೆ ರೂಪಾಯಿ 5.

29. ಕೊಬ್ಬನ್ನು ಕರಗಿಸುವದಕ್ಕೋಸ್ಕರ ಯಾ ಮಾಂಸ ಸಂಬಂಧವಾದ ಕಶ್ಮಲವನ್ನು, ಯಾ ರಕ್ತವನ್ನು ಕಾಯಿಸುವದಕ್ಕೋಸ್ಕರ ಉಪಯೋಗಿಸಲ್ಪಡುವ ಸ್ಥಳಗಳ, ಸಬ್ಬಿನಮನೆಯ, ಎಣ್ಣೇ ಕಾಯಿಸುವ ಮನೆಯ, ಬಣ್ಣಾ ಹಾಕುವ ಮನೆಯ, ತೊಗಲು ಹದಾಮಾಡುವ ಸ್ಥಳದ, ಇಟ್ಟಿಗೆ, ಕುಂಬಾರಸೂಳುಗಳ ಯಾ ಸುಣ್ಣದ ಗೂಡಿನ, ಸೇಗೋ ಯಾ ಸಕ್ಕರೇ ಕಾರ್ಖಾನೆಯ, ಅಥವಾ ಅಸಹ್ಯವಾದ ಯಾ ಅನಾರೋಗ್ಯವಾದ ವಾಸನೆ ಯುಂಟುಮಾಡುವ ಇತರ ಕಾರ್ಖಾನೆಯ ಯಾ ಕೆಲಸ ನಡೆಯುವ ಸ್ಥಳಗಳ, ಯಾ ಬಾಡಿಗೇ ಕುದುರೇಲಾಯಗಳು ಯಾ ಯಿತರ ಲಾಯಗಳು, ದನದ ಕೊಟ್ಟಿಗೆಗಳು, ಹಂದೀ ಗೂಡುಗಳು, ಇಂತಾವುಗಳ, ಸ್ವಂತಗಾರರು, ಯಾ ಹಿಡುವಳೀದಾರರು, ಯಿವುಗಳನ್ನು ಪ್ರತಿಸಲವೂ ತೆಗಸಿ ಹಾಕಬೇಕಾದ ಕಾಲದಲ್ಲಿ ಅಂತಾ ಯಾವ ಸ್ಥಳದೊಳಗೆ ಯಾ ಅದರ ಸುತ್ತಮುತ್ತಲೂ, ಯಿರುವ ವಿಶಿಷ್ಟ ಕಶ್ಮಲವನ್ನೂ, ರೋತೆಯನ್ನೂ, ವ ಕಸವನ್ನೂ, ಅಧಮಪಕ್ಷ 24 ಘಂಟೆಗೊಂದಾವರ್ತಿ ತೆಗೆದು ಹಾಕದೆ ಯಾ ತೆಗೆಯಿಸಿ ಹಾಕದೇ ಉಪೇಕ್ಷಿಸುವಿಕೆ,—ಜುರ್ಮಾನೆ 10 ರೂಪಾಯಿಗಳು.

30. ಮನೆ ಸ್ವಂತಗಾರರು ಬಿದ್ದುಹೋದ ಗೊಡೆಗಳನ್ನು, ಯಾ ತಲೆಬಾಗಿಲು ನಿಲುವುಗಳನ್ನು ದುರಸ್ತು ಮಾಡಲಿಕ್ಕೆ, ಯಾ ತಮ್ಮ ಆವರಣಗಳ ಯಾ ಅಂಗಳಗಳ ಗೋಡೆಗಳಿಗೆ ಬಂಣ ಬಳಿಯುವದಕ್ಕೆ ಅಥವಾ ಯಿಟ್ಟಿಗೆಗಳಿಂದ ಯಾ ಹೆಂಚುಗಳಿಂದ ಅಂಚು ಕಟ್ಟಲಿಕ್ಕೆ ನೋಟಿಸ್ ಜಾರೀ ಮಾಡಲ್ಪಟ್ಟ ತರುವಾಯ ಉಪೇಕ್ಷಿಸುವಿಕೆ,—ಜುರ್ಮಾನೆ 10 ರೂಪಾಯಿ.

31. ಪಬ್ಲಿಕ್ ಬೀದಿಗಳಲ್ಲಿ ಯಾ ರಸ್ತೆಗಳಲ್ಲಿ ಸಾದೇ ಒಡೆಯುವಿಕೆ—ಜುರ್ಮಾನೆ 5 ರೂಪಾಯಿ.

32. ಸಂಗಡ ಯಿರತಕ್ಕಬಗ್ಗೆ ಸಾಕಾದಷ್ಟು ಮಂದಿ ಯಿಲ್ಲದೆ ರಸ್ತೆಯಲ್ಲಿ ಹೊಡಕೊಂಡು ಬರುವ ದನಗಳ ಯಾ ಹಂ[illegible]ಳ ಜಿಮ್ಮೆಯುಳ್ಳವರಾಗಿರುವಿಕೆ. ಅವುಗಳನ್ನು ಪಬ್ಲಿಕ್ ರಸ್ತೆಯಲ್ಲಿ ಮೇಯಲಿಕ್ಕೆ ಬಿಡುವಿಕೆ, ಯಾ ಹಂದಿಗಳನ್ನು ಸ್ವೇಚ್ಛೆ[illegible] ತಿರುಗುವದಕ್ಕೆ ಬಿಡುವಿಕೆ.

II. ಮ್ಯುನಿಸಿಪಲ್ ಸರಹದ್ದುಗಳೊಳಗೆ ಬೆಳಿಗ್ಯೆ 4 ಘಂಟೆ ಲಾಗಾಯತ್ ರಾತ್ರಿ 8 ಘಂಟೆ ವರಿಗೆ ಕಾಯುವವನಿಲ್ಲದೆ ಯಾವ ಮನುಷ್ಯನೂ ದನಗಳನ್ನು ಮೇಯಿಸಕೂಡದು, ಮತ್ತು ಕಾಯುವವನಿಲ್ಲದೆ ಮೇಯುತಿದ್ದು ಶಿಕ್ಕುವ ದನಗಳು ತೊಂಡುವಾಡಿಗೆ ಒಯ್ಯಲ್ಪಡಲಿಕ್ಕೂ, ಅವುಗಳ ಸ್ವಂತಗಾರರು ಇದರಡಿ 3ನೇ ಕಲಂನಲ್ಲಿ ವಿವರಿಸಲ್ಪಟ್ಟ ಜುರ್ಮಾನೆಗಳನ್ನು ತೆರಲಿಕ್ಕೂ ಗುರಿಯಾಗತಕ್ಕದ್ದು.

III. ಮ್ಯುನಿಸಿಪಲ್ ಸರಹದ್ದುಗಳೊಳಗೆ ರಾತ್ರಿ 8 ಘಂಟೆಗೂ, ಬೆಳಿಗ್ಯೆ 4 ಘಂಟೆಗೂ, ಮಧ್ಯೆ ದನಗಳನ್ನು ಮೇಯುವದಕ್ಕೆ ಯಾವ ಮನುಷ್ಯನೂ ಬಿಡಕೂಡದು. ಸದರೀ ಹೊತ್ತಿನ ಮಧ್ಯೆ ಮೇಯುತಿದ್ದು ಹಿಡಿಯಲ್ಪಟ್ಟ ದನಗಳು ತೊಂಡುವಾಡಿಗೆ ಹೊಡಿಯಲ್ಪಟ್ಟು, ಈ ಕೆಳಗೆ ನಮೂದಿಸುವ ಪ್ರಕಾರ ಜುರ್ಮಾನೆ ತೆತ್ತ ಹೊರ್ತು ಖುಲಾಸೇ ಮಾಡಲ್ಪಡಲಾರದು.

| | | | |
|---|---|---|---|
| ಯೆಮ್ಮೇ ಕೋಣಗಳು | 1—0—0 | ಕರು ವ ಕತ್ತೆ | 0—4—0 |
| ಯೆತ್ತುಗಳು ಯಾ ಆಕಳು | 0—8—0 | ಕುದುರೆ ಯಾ ಟಾಕಣ | 0—8—0 |
| ಕುರಿ ಮ್ಯಾಕೆ | 0—2—0 | | |

33. ಒಂದು ಪಬ್ಲಿಕ್ ರಸ್ತೆಯಲ್ಲಿ ಯಾ ಒಂದು ಪಬ್ಲಿಕ್ ರಸ್ತೆಗೆ ಸಮೀಪವಾದ ಆಸ್‌ಪಾಸ್ ಪ್ರದೇಶದಲ್ಲಿ ದೇಹಭಾಧೆಗೆ ಹೋಗುವ ಅಥವಾ ಜನಗಳಿಗೆ ಹೇಸಿಕೆಯಾಗಿರುವ ಸ್ಥಳದಲ್ಲಿ ಯಾವ ಕಶ್ಮಲವನ್ನಾದರೂ, ಜಮಾಯಿಸಿ ಯಿಡುವ ಯಾವ ಮನುಷ್ಯನಾಗಲಿ, ಬಬ್ಬ ಮೇಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟ ಮೇಲೆ ಅವ್ವಲ್‌ದಫಾ ಅರ್ಧ ರೂಪಾಯಿ, ಎರಡನೇ ದಫಾ ಒಂದು ರೂಪಾಯಿ ಆತರುವಾಯ ನಡಿಸಲ್ಪಡುವ ಪ್ರತಿದಫಾಕ್ಕೂ, ಯೆರಡು ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು.

34. ಅಲಿಯುವ ಯಾವ ತಿರಪಗಾರನೂ, (ಸ್ಟ್ರೇಷ) (ಷಹರ್)ನ ಬೀದಿಗಳಲ್ಲಿ, ರಸ್ತೆಗಳಲ್ಲಿ ಯಾ ಸಂದಿಗಳಲ್ಲಿ ತಿರುಪಕ್ಕಾಗಿ ಬಾಧಿಸಕೂಡದು, ಯಾ ಜನಗಳನ್ನು ತಿರಪಬೇಡಕೂಡದು, ಮತ್ತು ರಸ್ತೆಗಳಲ್ಲಿ, ಬೀದಿಗಳಲ್ಲಿ ಯಾ ಗಲ್ಲಿಗಳಲ್ಲಿ ಯಾ ಬಂಡಿಗಳೊಳಗೆ ಯಾ ಮನೆಗಳೊಳಗೆ ತಿರಪಕ್ಕೋಸ್ಕರ ಬಾಧಿಸುವದಾಗಿ ಯಾ ಜನಗಳನ್ನು ತಿರುಪಬೇಡುವದಾಗಿ ಕಮಗೆ ಶಿಕ್ಕಿದ ಯಾ ತಮ್ಮಲ್ಲಿ ಫಿರ್ಯಾದ್ ಮಾಡಲ್ಪಟ್ಟ, ಅಲಿಯುವ ಯಾವ ತಿರಪಗಾರರನ್ನಾಗಲಿ ಮ್ಯುನಿಸಿಪಲ್ ಉಪನಿಬಂಧನೆಗಳಿಗೆ ವಿರುದ್ಧವಾಗಿ ನಡೆದದಕ್ಕೋಸ್ಕರ ಖೈದಿನಲ್ಲಿ ತೆಗೆದುಕೊಳ್ಳಲಿಕ್ಕೆ ಪೊಲೀಸ್‌ನವರು ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಈ ಉಪನಿಬಂಧನೆಯು, ಆ ಯಾ ಜಾತಿಯ ನೇಟಿವ್‌ಗಳಿಂದ ಆದರಿಸಲ್ಪಟ್ಟು, ಪ್ರತಿದಿನವೂ ಆಹಾರಕ್ಕಾಗಿ ತಮ್ಮ ಮನೆಗಳಿಗೆ ಬರುವಂತೆ ಪ್ರೋತ್ಸಾಹ ಪಡಿಸಲ್ಪಟ್ಟ ಯಾವ ವಿಧದೊಳಗೂ ತೊಂದರೆ ಕೊಡದಂತಾ ಮತಸಂಬಂಧಿಗಳಾದ ಯಾಚಕರ ವಿಷಯದಲ್ಲಿ ಬಾಧಕ ವಾಗುವದಿಲ್ಲವು.

ಮೇಲೆ ಕಂಡ ಉಪನಿಬಂಧನೆಗೆ ಬರ್‌ಖಿಲಾಫ್ ನಡೆಯುವದರಿಂದ ಹಾಗೆ ಅಪರಾಧಮಾಡುವ ಮನುಷ್ಯನು ಬಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟ ಮೇಲೆ ನಾಲ್ಕು ದಿನಗಳ ಸಾಧಾರಣ ಖೈದಿಗೆ ಗುರಿಯಾಗತಕ್ಕದ್ದು.

II. ಅಸಹ್ಯವಾದ, ಅಥವಾ ಅಂಟುವಂತಾ ರೋಗ ತಗಲಿಯಿರುವ ಜನಗಳು, ಮ್ಯುನಿಸಿಪಾಲಿಟಿಯ (ಷಹರಿನ) ಮಾರ್ಕೆಟ್‌ಗಳಲ್ಲಾಗಲಿ ಅಂಗಡಿಗಳಲ್ಲಾಗಲಿ ಯಾವ ಆಹಾರಪದಾರ್ಥವನ್ನಾಗಲಿ ಮಾರಕೂಡದೆಂತ ಅಥವಾ ಮಾರಾಟದ ಬಗ್ಯೆ ಹೊರಗೆ ಯಿಡಕೂಡದೆಂತ ನಿಷೇಧಿಸಲ್ಪಟ್ಟಿರುತ್ತಾರೆ. ಅಂತಾತಕಸೀರ್‌ವಂತರು ಬಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪುಸ್ಥಾಪಿಸಲ್ಪಟ್ಟು ಮೊದಲು ದಫಾಕ್ಕೂ, ತರುವಾಯ ಪ್ರತಿದಫಾಕ್ಕೂ, ಒಂದು ರೂಪಾಯಿಗೆ ಜಾಸ್ತೀ ಯಿಲ್ಲದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

35. ಮ್ಯುನಿಸಿಪಲ್ ಸರಹದ್ದುಗಳಲ್ಲಿ ಇಡಲ್ಪಟ್ಟ ಕುದುರೆಗಳು ಯಾ ಟಾಕಣಿಗಳು, ಯೆತ್ತುಗಳು, ಬಂಡಿಗಳು, ಮತ್ತು ನಾಯಿಗಳು, ಇವುಗಳ ಸ್ವಂತಗಾರರು ಈ ಕೆಳಗೆ ಕಂಡ ಪ್ರಕಾರ ತೆರಿಗೆಗಳನ್ನು ಕೊಡತಕ್ಕದ್ದು.

| | | | | |
|---|---|---|---|---|
| ಯೆರಡು ಚಕ್ರಗಳ ಬಂಡಿಗಳು | ಚಷ್ ಮಾಹೆ 1ಕ್ಕೆ | | ರೂ | 2—0—0 |
| ನಾಲ್ಕು ಚಕ್ರಗಳ ಬಂಡಿಗಳು | ” | ” | | 3—0—0 |
| ಈ ಶೀಮೆ ತಟ್ಟುವಿಗೆ | ” | ” | | 1—0—0 |
| ಪ್ರತಿ ಟಾಕಣಿಗೆ | ” | ” | | 2—0—0 |
| ಜೊತೆ ಬಂಡೀ ಯಾ ಗಾಡಿ ಯೆತ್ತುಗಳಿಗೆ | ” | ” | | 2—0—0 |
| ನಾಯಿಗೆ | ” | ” | | 1—0—0 |
| ಪ್ರತಿ ಕುದುರೆಗೂ | ” | ” | | 4—8—0 |

ತೆರಿಗೆ ಕೊಡೋಣಾದ ಮತ್ತು ಲೈಸೆನ್ಸ್ ತೆಗದುಕ್ಕೊಳ್ಳೋಣಾದ ನಾಯಿಗಳಿಗೆ ಕತ್ತಿಗೆ ಪಟ್ಟೀ ಹಾಕತಕ್ಕದ್ದು.

ಇಲ್ಲದಿದ್ದರೆ ತೊಂಡು ನಾಯಿಯೆಂತ ಯಾ ಬೇವಾರಸ್ ನಾಯಿಯೆಂತ ಕೊಂದು ಹಾಕಲ್ಪಡುವದಕ್ಕೆ ಗುರಿಯಾಗತಕ್ಕದ್ದು.

36. ಧೂಳು, ಕಸ, ಬೂದಿ, ವ ಕಚರಾ ಇಂತಾಪ್ರಗಳನ್ನು, ಆಚೆಗೆ ಸಾಗಿಸಿಕೊಂಡುಹೋಗುವ ವರಿಯುಂತ ಹಂಗಾಮೀ ಯಾಗಿ, ಹಾಕಿ ಇಡಬಹುದಾದ, ಕ್ರವಲಿಸತಕ್ಕಂತಾ ಅಥವಾ ನೆಲೆಯಾಗಿರುವಂತಾ ಯಷು, ಕಚರೆ ತೊಟ್ಟಿಗಳನ್ನಾಗಲಿ, ಇತರ ಅನುಕೂಲಗಳಾದ ಆಧಾರಗಳನ್ನಾಗಲಿ, ಪ್ರೆಸೀಡೆಂಟರು ಒದಗಿಸಿ, ಯುಕ್ತಗಳಾದ ಮತ್ತು ಅನುಕೂಲಗಳಾದ ಸ್ಥಳಗಳಲ್ಲಿ ಇಡಿಸಬಹುದು, ಮತ್ತು ಬೀದಿಗಳೊಳಗಿರುವ ಮನೆಗಳ ವಾಸಸ್ಥರು ಮೇಲೆ ಕಂಡ ದರೋಬಸ್ತು ಕಚರೇ ವಗೈರೇಯನ್ನು ಪ್ರತಿದಿನವಾಗಲಿ, ಅನ್ಯಥಾ ಯಾವದಾದರೊಂದು ಕಾಲಕ್ಕೊಂದಾವರ್ತಿಯಾಗಲಿ ಸದರೀ ಆಧಾರಗಳಲ್ಲಿ ಜಮಾಯಿಸಿ ಇಡುವಂತೆ ತಾಕೀದ್ ಮಾಡಬಹುದು:

ಅಂತಾ ಆಧಾರಗಳು ಕಲ್ಪಿಸಲ್ಪಟ್ಟ ಬಳಿಕ ಮತ್ತು ಮೇಲೆ ಕಂಡಮೇರೆ ತಾಕೀದ್ ಮಾಡಲ್ಪಟ್ಟ ಬಳಿಕ ಪ್ರೆಸೀಡೆಂಟರಿಂದ ಗೊತ್ತುಮಾಡಲ್ಪಡುವ ಅಂತಾ ಆಧಾರಗಳಲ್ಲಿ ಯಾ ಸ್ಥಳಗಳಲ್ಲಿ ಮತ್ತು ಅಂತಾ ರೀತಿಯಾಗಿ, ಮತ್ತು ಅಂತಾ ಹೊತ್ತುಗಳಲ್ಲಿ ಅಲ್ಲದೆ ಅನ್ಯಥಾ ಅಂತಾ ಯಾವ ಪದಾರ್ಥಗಳನ್ನಾಗಲಿ ಯಾವ ಬೀದಿಯೊಳಗಾಗಲಿ, ಯಾವದಾದರೂ ಮನೆಯ ಸ್ಥಿರವಾದ ಜಗಲಿ, ಯಾ ಹಜಾರ ಇಂತಾದ್ದರಮೇಲೆಯಾಗಲಿ ಮನೆಗೂ ಬೀದಿಗೂ ಮಧ್ಯೆ ಇರುವ ಯಾವ ಜಮೀನ ಮೇಲಾಗಲಿ, ಜಮಾಯಿಸಿ ಇಡುವ ಯಾ ಇಡಿಸುವ ಅಥವಾ ಆ ಬಗ್ಯೆ ಅಪ್ಪಣೆ ಕೊಡುವ ಪ್ರತಿ ಮನುಷ್ಯನೂ, 2 ಆಣೆ ಲಾಗಾಯತು 5 ರೂಪಾಯಿಗಳ ವರೆಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಪ್ರೆಸಿಡೆಂಟರಿಂದ ಗೊತ್ತುಮಾಡಲ್ಪಡತಕ್ಕ ಸ್ಥಳಗಳೊಳಗೂ, ಆರೀತಿಯಾಗಿಯೂ, ಅಂತಾ ಕಾಲಗಳೊಳಗೂ ಅಲ್ಲದೆ ಅನ್ಯಥಾ ಯಾವ ಬೀದಿಯಲ್ಲಾಗಲಿ ಯಾವನು ಕಶ್ಮಲವನ್ನು ಹಾಕಿ ಇಡುತ್ತಾನೋ ಯಾ ಇಡಗೊಡಿಸುತ್ತಾನೋ ಅಥವಾ ಯಾವದಾದರೂ ಬೀದಿಯಲ್ಲಿಯಾಗಲಿ, ಮನೆಯ ತಳವರಸೆ, ಜಗತಿ, ಯಾ ವಸಾರೆಯಲ್ಲಿ ಅಥವಾ, ಮನೆಗೂ ಬೀದಿಗೂ ಮಧ್ಯೆ ಇರುವ ಯಾವದಾದರೂ ಜಮೀನಿನಲ್ಲಾಗಲಿ, ನದೀತೀರದ ಪೈಕಿ ಯಾವ ಭಾಗದಲ್ಲಾಗಲಿ, ಯಾವದಾದರೂ ಧೂಳು, ಕಸ, ಸಗಣಿ, ಬೂದಿ; ತೊಟ್ಟಿ, ಅಡಿಗೇಮನೆ ಯಾ ಲಾಯ ಇಂತಾದ್ದರ ಬಾಬತು ಕಚರಾ ಅಥವಾ ಯಾವ ಬಗೆಯದಾದರೂ ಕಶ್ಮಲ, ಜಂತು ಸಂಬಂಧವಾದ ಯಾವದಾದರೂ ಪದಾರ್ಥ, ಅಥವಾ ಕನ್ನಡಿ ಯಾ ಮಡಿಕೆ ಚೂರು, ಇಟಿಗೇ ಮುರುಕು, ಗಾರೆ ಯಾ ಇತರ ಕಚರಾ, ಇಂತಾದ್ದನ್ನಾಗಲಿ, ಜಮಾಯಿಸಿ ಇಡುವಂತೆ ತನ್ನ ನೌಕರಿಗೆ ಅಪ್ಪಣೇ ಕೊಡುತ್ತಾನೋ. ಅಂತಾ ಮನುಷ್ಯನು 2 ಆಣೆಗಳ ಲಾಗಾಯತ್ 5 ರೂಪಾಯಿಗಳ ವರಿಗೆ, ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

37. ಯಾವನು, (ಬಚ್ಚಲುನೀರು ಬೀದಿಯಲ್ಲಿ ಹರಿಯಗೊಡಿಸಿ ತನಗೆ ಸಂಬಂಧಪಟ್ಟ ಅಥವಾ ತನ್ನ ಭೂಮಿಯಲ್ಲಿರುವ ಯಾವದಾದರೂ ಬಚ್ಚಲು, ಯಾ ಚರಂಡಿ ಯಾ ಪಾಯಖಾನೆ ಇಂತಾದ್ದರ ನೀರನ್ನಾಗಲಿ, ದುರ್ವಾಸನೆಯುಳ್ಳ ಇನ್ಯಾವ ದ್ರವ ಪದಾರ್ಥವನ್ನಾಗಲಿ, ಯಾವ ಬೀದಿಯಲ್ಲಾದರೂ, ಹರಿಯುವಂತೆ ಯಾ ಚೆಲ್ಲಲ್ಪಡುವಂತೆ ಯಾ ಹಾಕಲ್ಪಡುವಂತೆ ಮಾಡುತ್ತಾನೋ ಯಾ ಮಾಡುವಂತೆ ಅಪ್ಪಣೆ ಕೊಡುತ್ತಾನೋ, ಅಥವಾ, ಯಾವ ಪಾಯಖಾನೆ ಇಂದಲಾಗಲಿ ಬಚ್ಚಲು ಗುಣಿಯಿಂದಲಾಗಲಿ ಅಸಹ್ಯವಾದ ಯಾವ ಪದಾರ್ಥವಾದರೂ ಯಾವ ಬೀದಿಯೊಳಗಾಗಲಿ ಇರುವ ಮೇಲ್ಭಾಗದ ಚರಂಡಿಯೊಳಗೆ ಹರಿಯುವಂತೆ ಯಾ ಚೆಲ್ಲಲ್ಪಡುವಂತೆ ಮಾಡುತ್ತಾನೋ ಯಾ ಅಪ್ಪಣೇ ಕೊಡುತ್ತಾನೋ ಅಂತಾವನು 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

38. ಪ್ರೆಸೀಡೆಂಟರು ಆಗಿಂದಾಗ್ಯೆ ಹೊತ್ತುಗಳನ್ನು ನಿಷ್ಕರ್ಷೆ ಮಾಡಿ ಅಂತಾ ಹೊತ್ತಿನೊಳಗೇನೇ ಯಾವ ಮಲವನ್ನಾಗಲಿ, ಅಸಹ್ಯವಾದ ಅಂತಾ ಯಿತರ ವಸ್ತುವನ್ನಾಗಲಿ ತೆಗಸಿಹಾಕುವದು ನ್ಯಾಯವಾಗಿರತಕ್ಕದ್ದು. ಪ್ರೆಸೀಡೆಂಟರು ಅಂತಾ ಕಾಲವನ್ನು ಗೊತ್ತುಮಾಡಿ ಅದನ್ನು ಕುರಿತು ಬಹಿರಂಗವಾದ ನೋಟಿಸ್ ಕೊಟ್ಟಾಗ ಹಾಗೆ ನಿಷ್ಕರ್ಷೆ ಮಾಡಲ್ಪಟ್ಟ ಹೊತ್ತಿನೊಳಗೆ ಶಿವಾಯಿ ಅನ್ಯಥಾ ಅಂತಾ ಅಸಹ್ಯವಾದ ಯಾವ ವಸ್ತುವನ್ನಾಗಲಿ ಯಾವ ಬೀದಿಯ ಮಾರ್ಗವಾಗಿ ಯಾದರೂ ತೆಗದುಕೊಂಡು ಹೋಗುತ್ತಾನೋ ಯಾ ತೆಗದುಕೊಂಡು ಹೋಗುವಂತೆ ಮಾಡುತ್ತಾನೋ ಮತ್ತು ಯಾವನು ಪ್ರೆಸೀಡೆಂಟರಿಂದ ನಿಷ್ಕರ್ಷೆ ಯಾಗಿರಲಿ ಆಗದೆ ಯಿರಲಿ ಪರಂತು ಅಂತಾ ಯಾವ ಹೊತ್ತಿನಲ್ಲಾಗಲಿ ಕಶ್ಮಲ ಹೊರಗೆ ಬೀಳದಂತೆ ಯಾ ದುರ್ಗಂಧ ಹೊರಗೆ ಬಾರದಂತೆ ತಕ್ಕ ಮುಚ್ಚಳವಿಲ್ಲದೆ ಯಾವದಾದರೂ ಬಂಡಿ ಯಾನಸಾಧನ ಯಾ ಯಿತರೆ ಆಧಾರ ಯಾ ಪಾತ್ರ ಯಿಂತಾದ್ದನ್ನು ಅಂತಾ ಯಾವ ಕಾರ್ಯಕ್ಕೋಸ್ಕರವಾಗಿ ಉಪಯೋಗಿಸುತ್ತಾನೋ ಅಥವಾ ಯಾವನು ಅಂತಾ ಅಸಹ್ಯವಾದ ಕಶ್ಮಲವನ್ನು ತೆಗೆಸಿಕೊಂಡು ಹೋಗುವಲ್ಲಿ ಅದನ್ನು ಕೆಳಗೆ ಚೆಲ್ಲುತ್ತಾನೋ ಯಾ ಸುರಿಯುತ್ತಾನೋ, ಯಾವನು ಅಂತಾ ಅಸಹ್ಯವಾದ ಯಾವ ಕಶ್ಮಲವಾದರೂ ಚೆಲ್ಲಿದ ಅಥವಾ ಬಿದ್ದಕಡೆಯಲ್ಲೆಲ್ಲ ಅದನ್ನು ಚನ್ನಾಗಿ ಗುಡಿಸಿ ಸಾಫಮಾಡುವದಿಲ್ಲವೋ, ಯಾವನು ಮೇಲೆ ಕಂಡ ಯಾವ ಕಾರ್ಯಕ್ಕಾಗಲಿ ಉಪಯೋಗಿಸಲ್ಪಡತಕ್ಕ ಯಾವದಾದರೂ ಬಂಡಿ ಯಾನ ಸಾಧನ ಆಧಾರ ಯಾ ಪಾತ್ರ ಇಂತಾದ್ದನ್ನು ಪ್ರೆಸೀಡೆಂಟರು ಆಗಿಂದಾಗ್ಯೆ ಬಹಿರಂಗವಾದ ನೋಟಿಸ್‌ಮೂಲಕ ಸದರೀ ಬಗ್ಯೆ ಮೊಕರರ್ ಮಾಡುವ ಬೀದಿ, ಅಥವಾ ಮಾರ್ಗವಲ್ಲದೆ ಬೇರೆ ಯಾವ ಬೀದಿ ಯಾ ಮಾರ್ಗದಲ್ಲಿ ಹೊಡೆಯುತ್ತಾನೋ, ಯಾ ತೆಗದುಕೊಂಡು ಹೋಗುತ್ತಾನೋ, ಅಥವಾ ಹೊಡೆಯುವಂತೆ ಯಾ ತೆಗದುಕೊಂಡು ಹೋಗುವಂತೆ ಮಾಡುತ್ತಾನೋ. ಅಂತಾ ಮನುಷ್ಯನು 5 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದು.

39. ಈ ಉಪನಿಬಂಧನೆಗಳಿಂದ ಉಂಟು ಮಾಡಲ್ಪಟ್ಟ ಅಧಿಕಾರವನ್ನು ಅನುಸರಿಸಿ ಜಮಾಯಿಸಿ ಸಾಗಿಸಲ್ಪಟ್ಟ ಕಶ್ಮಲವನ್ನು ಹಾಕಿ ಇಡುವ ಬಗ್ಯೆ, ಮಲ, ಸಗಣಿ, ವ ಇತರ ಕಶ್ಮಲ, ಧೂಳು, ಕಸ, ಬೂದಿ, ಕಚರಾ, ಇಂತಾದ್ದನ್ನು ಜಮಾಯಿಸಿ ಇಡುವ ಬಗ್ಯೆ, ಮತ್ತು ಈ ಉಪನಿಬಂಧನೆಗಳ ಬಾಬತು ಮೇಲೆ ಕಂಡ ಕಾರ್ಯಗಳಿಗಾಗಲಿ, ಆಪೈಕಿ ಯಾವ ಕಾರ್ಯಗಳಿಗಾಗಲಿ ಬೇಕಾದ ದರೋಬಸ್ತು ಜಾನವಾರ್‍ಗಳನ್ನೂ, ಬಂಡಿಗಳನ್ನೂ, ಸಾಧನಗಳನ್ನೂ, ಇತರ ವಸ್ತುಗಳನ್ನೂ, ಇಡುವ ಬಗ್ಯೆ ಅನುಕೂಲಗಳಾದ ಸ್ಥಳಗಳನ್ನು ಮೆಂಬರ್‍ಗಳು, ಆಗಿಂದಾಗ್ಯೆ ಯೇರ್ಪಡಿಸತಕ್ಕದ್ದು. ಯಾ ಒದಗಿಸತಕ್ಕದ್ದು, ಮತ್ತು ಅಂತಾ ಯಾವ ಕಾರ್ಯಕ್ಕೋಸ್ಕರವಾಗಲಿ ಮೆಂಬರ್‍ಗಳು, ತಾವು ಜರೂರೆಂದು ಭಾವಿಸುವ ಯಾವ ಜಮೀನನ್ನಾಗಲಿ, ಕಟ್ಟಡಗಳನ್ನಾಗಲಿ ಖರೀದಿಗೆ ಕೊಳ್ಳಬಹುದು, ಯಾ ಬಾಡಿಗ್ಯೆ ತೆಗದು ಕೊಳ್ಳಬಹುದು, ಅಥವಾ ತಮ್ಮಿಂದ ಕೊಂಡುಕೊಳ್ಳತಕ್ಕ ಯಾ ಬಾಡಿಗ್ಯೆ ತೆಗದುಕೊಳ್ಳತಕ್ಕ ಯಾವ ಜಮೀನಿನಲ್ಲಾಗಲಿ ಯಾವ ಹೊಸ ಕಟ್ಟಡವಾದರೂ ಕಟ್ಟಿಸಲ್ಪಡುವಂತೆ ಮಾಡಬಹುದು.

40. ಈ ಬೈಲಾ ನಿಬಂಧನೆಗಳು ಲಗಾವಾಗತಕ್ಕ ಸರಹದ್ದುಗಳೊಳಗೆ ಇರುವ ಯಾವ ಬೀದಿಯಲ್ಲಾಗಲಿ, ಅದರ ಸಮೀಪದಲ್ಲಾಗಲಿ, ಪ್ರತಿ ಮನೆಯ ವಾಸಸ್ಥನೂ, ತನ್ನ ವತಾರದಿಂದ, ಮಲವಗೈರೇ ತೆಗದು ಕೊಂಡು ಹೋಗುವ ಬಗ್ಯೆ. ಮ್ಯುನಿಸಿಪಲ್ ಮೆಂಬರ್‍ಗಳಿಂದ ಒದಗಿಸೋಣಾದ ಬಂಡಿಗಳಲ್ಲಿ ದರೋಬಸ್ತು ಮಲವನ್ನೂ, ಸಗಣಿಯನ್ನೂ, ಇತರ ಕಚರೇಯನ್ನೂ ಮ್ಯುನಿಸಿಪಲ್ ಮೆಂಬರ್‍ಗಳು ನಿಯಮಿಸುವ ಕಾಲದಲ್ಲಿಯೂ, ಅಂತಾ ರೀತಿಯಾಗಿಯೂ ಸಾಗಿಸುವದು ಅವನ ಕಾರ್ಯವಾಗಿರತಕ್ಕದ್ದು. ಪರಂತು ಯಾವದಾದರೂ ಮನೆಯ ವಾಸಸ್ಥನು ಸದರೀ ಮಲ, ಸಗಣಿ, ಯಾ ಇತರ ಕಚರೆ ಇಂತಾದ್ದನ್ನು ಸಾಗಿಸಿಕೊಂಡು ಹೋಗಬೇಕೆಂದು ಖಾಯಿಷ್ ಮಾಡಿದಲ್ಲಿ ಈ ಬೈಲಾನಿಬಂಧನೆಗಳ 38ನೇ ಸೆಕ್ಷನ್ ನಿಬಂಧನೆಗಳಿಗೆ ಅನುಗುಣವಾಗಿ ಆ ಮೇರೆ ಮಾಡುವದು ಅವನ ಎಖ್ತ್ಯಾರೀ ಮೇಲೆ ಇರತಕ್ಕದ್ದು.

41. ಈ ಬೈಲಾ ನಿಬಂಧನೆಗಳು ಲಗಾವಾಗತಕ್ಕ ಸರಹದ್ದಿನೊಳಗೆ ಯಿರುವ ಮನೆಯ ವಾಸಸ್ಥನಾದ ಯಾವನು ಸರಿಯಾದ ಆಧಾರವಲ್ಲಿ ಅಲ್ಲವೆ ಅನ್ಯಥಾ 24 ಗಂಟೆಗಳಿಗಿಂತ ಹೆಚ್ಚಾಗಿ ಯಾವ ಕಸ, ಸಗಣಿ, ಮಲ, ಕಚರಾ, ಅಥವಾ ಯಾವದಾದರೂ ಬಾಧಕವಾದ ಯಾ ಅಸಹ್ಯವಾದ ಪದಾರ್ಥ ಯಿಂತಾದ್ದನ್ನು ಅಂತಾ ಯಾವದಾದರೂ ಮನೆಗಳ ಛಾವಣೀಯಲ್ಲಿ ಯಾ ಛಾವಣಿಯ ಮೇಲೆ ಅಥವಾ ಅಂತಾ ಮನೆಗೆ ಸೇರಿದ ಮತ್ತು ಅಂತಾ ಮನೆಯ ವಾಸಸ್ಥನಿಂದ ವಾಸ ಮಾಡಲ್ಪಡುವ ಯಾವ ಔಟ್ ಹೌಸ್ ವಗೈರೆಯ ಛಾವಣೀ ಯೊಳಗೆ ಯಾ ಅವರ ಮೇಲ್ಗಡೆ, ಯಾವದಾದರೂ ಅಂಗಳದಲ್ಲಿ ಯಾ ಜಮೀನಿನಲ್ಲಿ ಯಿಡುತ್ತಾನೋ ಯಾ ಯಿಡಗೊಡಿಸುತ್ತಾನೋ ಅಂತಾವನು 2 ಆಣೆಗಳ ಲಾ॥ 5 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

42. ಝಾಡ್ ಮಾಲೀಯಿಂದ ವಾಡಿಕೆಯಾಗಿ ನೆರವೇರಿಸಲ್ಪಡತಕ್ಕ ಕೆಲಸಗಳನ್ನು ತಮ್ಮ ಏಜಂಟರ ಮಾರ್ಫತ್ ಮಾಡಿಸುತ್ತೇವೆಂತ, ಯಾವ ಮನೆಯ ವಾಸಸ್ಥನಿಗಾಗಲಿ, ವಾಸಸ್ಥರಿಗಾಗಲಿ, ಯಿದರ ಹಿಂದಿನಕಡೇ ಸೆಕ್ಷನ್‍ಗಳನ್ನು ಅನುಸರಿಸಿ ನೋಟಿಸ್ ಕೊಡೋಣವೂ, ಮತ್ತು ಈ ಬಗ್ಯೆ ಸಾಕಾದಷ್ಟು ಮಂದಿ ಝಾಡ್‌ಮಾಲೀಗಳನ್ನು ಯಿಡುವಣವೂ, ಮೆಂಬರ್‍ಗಳ ಕಾರ್ಯವಾಗಿರತಕ್ಕದ್ದಲ್ಲದೆ ಯಾವ ಮನೆಯನ್ನು ಗುಡಿಸುವ ಕೆಲಸವು ಹಾಗೆ ಅವರುಗಳಿಂದ ವಹಿಸಲ್ಪಡುತ್ತೋ ಅಂತಾ ಪ್ರತಿ ಮನೆಗೂ, ಆ ಮನೆಯ ವಾಸಸ್ಥರು ಸಾಧಾರಣವಾದ ಒಬ್ಬ ಝಾಡ್ ಮಾಲೀಗೆ ನ್ಯಾಯವಾಗಿ ಯೆಷ್ಟು ಕೊಡಬೇಕಾಗುವದೋ ಅಷ್ಟಕ್ಕೆ ಜಾಸ್ತೀಯಿಲ್ಲದಂತೆ ಒಂದು ತೀರ್ವೆ ಮೊಕರರ್ ಮಾಡುವದು ಅವರುಗಳಿಗೆ ನ್ಯಾಯ್ಯವಾಗಿರತಕ್ಕದ್ದು.

43. ಮೆಂಬರ್‍ಗಳ ಹುಕ್ಕುಂ ಅನುಸರಿಸಿ ಬೀದಿಗಳಲ್ಲಿಯೂ ಮನೆಗಳೊಳಗೂ, ಪಾಯಖಾನೆಗಳಲ್ಲಿಯೂ. ಜಲದಾರೆಗಳಲ್ಲಿಯೂ, ಬಚ್ಚಲು ತೊಟ್ಟಿಗಳಲ್ಲಿಯೂ, ಜಮಾಯಿಸಲ್ಪಡುವ ದರೋಬಸ್ತು ಕಸ, ಧೂಳು, ಬೂದಿ, ಕಚರಾ, ಜಲದಾರೆ, ರೊಚ್ಚು, ಮಣ್ಣು, ಸಗಣಿ, ವ ಕಶ್ಮಲ, ಇಂತಾವು ಅವರುಗಳ ಸ್ವತ್ತಾಗಿರತಕ್ಕವು; ಮತ್ತು ಅವರು ತಮಗೆ ಯುಕ್ತ ತೋರುವ ಪ್ರಕಾರ ಸದರೀ ಕಚರೇ ವಗೈರೇಯನ್ನು ಮಾರುವದಕ್ಕೆ ಯಾ ವಿನಿಯೋಗಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು-ಅವುಗಳನ್ನು ವಿಕ್ರಯಿಸುವದರಿಂದ ಹುಟ್ಟುವಳೀ ಯಾಗುವ ಹಣವು ಈ ಬೈಲಾ ನಿಬಂಧನೆಗಳ ಕಾರ್ಯಗಳಿಗೆ ವಿನಿಯೋಗಿಸತಕ್ಕದ್ದು.

44. ಮೆಂಬರ್‍ಗಳು ತಮ್ಮಲ್ಲಿ ಐವಜು ಅನುಕೂಲಿಸುವಷ್ಟು ಮಟ್ಟಿಗೆ ಮತ್ತು ಜನಗಳ ಅನುಕೂಲಕ್ಕೆ ಜರೂರೆಂತ ತಮಗೆ ತೋರುವಷ್ಟು ಮಟ್ಟಿಗೆ ಪಬ್ಲಿಕ್ ಬೀದಿಗಳಲ್ಲಿ ನೀರು ಹಾಕಿಸತಕ್ಕದ್ದು. ಮತ್ತು ಆ ಬಗ್ಯೆ ಜರೂರೆಂತ ಅವರು ಯೆಣಿಸುವಂತ ಕೆಲಸಗಳನ್ನೂ, ಯಂತ್ರಗಳನ್ನೂ ಒದಗಿಸಬಹುದು.

45. ಮೆಂಬರುಗಳು ತಮ್ಮ ವಶದಲ್ಲಿ ಐವಜು ಅನುಕೂಲಿಸುವಷ್ಟು ಮಟ್ಟಿಗೆ ಪಬ್ಲಿಕ್ ಬೀದಿಗಳು, ರಸ್ತೆಗಳು ಇವುಗಳ ಪೈಕಿ ಯಾವದಕ್ಕೆ ಬೆಳಕು ಇಡತಕ್ಕದ್ದು ಆವಶ್ಯಕವೆಂದು ಯೆಣಿಸುತ್ತಾರೋ ಅದರಲ್ಲಿ ದೀಪ ಹಚ್ಚತಕ್ಕ ಬಗ್ಯೆ ತಮಗೆ ಜರೂರೆಂದು ತೋರುವ ದೀಪಗಳನ್ನೂ, ದೀಪದ ಕಂಭಗಳನ್ನೂ, ಅಂತಾ ಇತರ ಸಾಧನಗಳನ್ನೂ ಒದಗಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಯುಕ್ತವಾದ ಕ್ರಮವಲ್ಲಿ ಇಡಿಸತಕ್ಕದ್ದು. ಮತ್ತು ಸದರೀ ದೀಪಗಳನ್ನು ಒರಸಿ ಸಾಫ್ ಮಾಡುವದು, ಸಿದ್ಧ ಪಡಿಸುವದು, ದೀಪ ಹಚ್ಚುವದು ಈ ಕೆಲಸಗಳಿಗೆ ಬೇಕಾದಷ್ಟು ಮಂದಿಯನ್ನು ಇಟ್ಟುಕೊಳ್ಳತಕ್ಕದ್ದು. ಮತ್ತು ಮೆಂಬ

ರಿಗಳು ಆಗಿಂದಾಗ್ಗೆ ತಮಗೆ ಜರೂರೆಂದು ತೋರುವ ಮೇರೆ ಸದರೀ ದೀಪಗಳ ಸಂಖ್ಯೆಯನ್ನೂ, ಸ್ಥಳಗಳನ್ನೂ ಜಾಸ್ತೀ ಮಾಡಬಹುದು, ಅಥವಾ ಬೇರೇ ವಿಧವಾಗಿ ಬದಲಾವಣೀ ಮಾಡಬಹುದು.

46. ಈ ಬೈಲಾನಿಬಂಧನೆಗಳು ಜಾರೀಯಲ್ಲಿ ಬಂದತರುವಾಯು ಯಾವ ಪಬ್ಲಿಕ್ ಬೀದಿಯಲ್ಲಿಯಾಗಲಿ ರಸ್ತೆಯಲ್ಲಿಯಾಗಲಿ ಅಂತಾ ಯಾವ ಬೀದಿಯ ಪಾರ್ಶ್ವ ಭಾಗದಲ್ಲಿ ಖುಲ್ಲಾಯಿರತಕ್ಕ ಯಾವದಾದರೂ ಚರಂಡಿ, ಬಚ್ಚಲು, ಕಾಲುವೆ ಇಂತಾದ್ದರಲ್ಲಿ ಯಾಗಲಿ, ಇಂತಾದ್ದರಮೇಲೆಯಾಗಲಿ ಯಾವನು ಯಾವದಾದರೂ ಗೋಡೆ ಹಾಕುತ್ತಾನೋ ಅಥವಾ ಯಾವ ಆವರಣ ಮುಂತಾದ್ದನ್ನು ಯಾ ಇತರ ನಿರೋಧವನ್ನು, ಯಾ ಒತ್ತುವರಿಯನ್ನು ಕಟ್ಟುತ್ತಾನೋ ಯಾ ಇಡುತ್ತಾನೋ ಅಂತಾವನು ಯೆರಡಾಣೆ ಲಾಗಾಯಿತು ಐದುರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು, ಮತ್ತು ಮೆಂಬರಗಳು ಅಂತಾ ಯಾವ ನಿರೋಧವನ್ನಾಗಲಿ, ಒತ್ತುವರಿಯನ್ನಾಗಲಿ ತೊಲಗಿಸುವದಕ್ಕೆ ಅಧಿಕಾರ ವುಂಟಾಗಿರತಕ್ಕದ್ದು. ಹಾಗೆ ತೊಲಗಿಸುವದರ ಲಾಗವಡು ಸದರೀ ಅಟಕಾವ್ ವಗೈರೆ ಉಂಟುಮಾಡಿದ ಮನುಷ್ಯನು ಕೊಡತಕ್ಕದ್ದಾಗಿ, ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವಸೂಲ್ಮಾಡಲ್ಪಡತಕ್ಕದ್ದು. ಪೋಲೀಸ್‌ಸೂಪರಿಂಟೆಂಡೆಂಟರ ಅನುಮತೀಮೇಲೆ ಯಾವ ಪಬ್ಲಿಕ್ ಬೀದಿಯಲ್ಲಿ ಆಗಲಿ ಉತ್ಸವ ಮದುವೆ ಮುಂತಾದ ಸಮಯಗಳಲ್ಲಿ ಹಂಗಾಮಿಯಾಗಿ ಯಾವದಾದರೂ ಕಟ್ಟುವದಕ್ಕೆ ಅಪ್ಪಣೆ ಕೊಡುವ ವಿಷಯದಲ್ಲಿ ಇದರಲ್ಲಿ ಅಡಗಿರುವ ಯಾವ ಅಂಶವೂ ಮೆಂಬರಗಳನ್ನು ಆತಂಕಪಡಿಸತಕ್ಕದ್ದಲ್ಲವು.

47. ಯಾವನು ಯಾವ ಪಬ್ಲಿಕ್ ಬೀದಿಯ, ರಸ್ತೆಯ, ತಳವರಿಸೇ ಕಲ್ಲುಗಳನ್ನಾಗಲಿ, ಚಾಪು ಕಲ್ಲುಗಳನ್ನಾಗಲಿ ಇತರ ಸಾಮಾನುಗಳನ್ನಾಗಲಿ, ಅಥವಾ ಆವರಣಗಳು, ಕಂಭಗಳು, ಇಂತಾವುಗಳನ್ನಾಗಲಿ, ಪಬ್ಲಿಕ್ ದೀಪಸ್ತಂಭಗಳನ್ನಾಗಲಿ, ಪ್ರೆಸಿಡೆಂಟರ ಬರವಣಿಗೇ ಮೂಲಕವಾದ ಅನುಮತೀ ಯಿಲ್ಲದೆ ಅಥವಾ ಯಿತರ ನ್ಯಾಯವಾದ ಅಧಿಕಾರವಿಲ್ಲದೆ ಕೆಡಿಸುತ್ತಾನೋ, ಸ್ಥಳ ತಪ್ಪಿಸುತ್ತಾನೋ, ತೆಗದು ಬಿಡುತ್ತಾನೋ, ಅವುಗಳಲ್ಲಿ ಯೇನಾದರೂ ಬದಲಾವಣೀ ಮಾಡುತ್ತಾನೋ ಅಂತಾವನು ಯೆರಡಾಣೇ ಲಾಗಾಯಿತು ಐದು ರೂಪಾಯಿಗಳ ವರಿವಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

48. ಯಾವ ಬೀದಿಯು ಯಾವ ಹೆಸರಿನಲ್ಲಿ ತಿಳಿಯಲ್ಪಡತಕ್ಕದ್ದೋ ಆ ಹೆಸರನ್ನು ಪ್ರೆಸಿಡೆಂಟರು ಆಗಿಂದಾಗ್ಗೆ ಪ್ರತಿ ಬೀದಿಯ ಯೆರಡು ಕೊನೆಗಳು ಯಾ ಮೂಲೆ ಯಾ ಮುಂಭಾಗ ಇಂಥಾದ್ದರಲ್ಲಿ ಯಾ ಇಂತಾದ್ದರ ಸಮೀಪದಲ್ಲಿರುವ ಯಾವದಾದರೂ ಕಟ್ಟ ಯಾ ಗೋಡೆ ಯಾ ಸ್ಥಳ ಇಂತಾದ್ದರ ಪ್ರಸಿದ್ಧವಾದ ಪ್ರದೇಶದಲ್ಲಿ ಇಡಿಸಬಹುದು, ಯಾ ಕಟ್ಟಿಸಬಹುದು; ಮತ್ತು ಯಾವನು ಅಂತಾ ಹೆಸರನ್ನು ನಾಶಪಡಿಸುತ್ತಾನೋ ಕಿತ್ತುಹಾಕುತ್ತಾನೋ ಕೆಡಿಸುತ್ತಾನೋ ಅಥವಾ ಪ್ರೆಸಿಡೆಂಟರ ಅಪ್ಪಣೇಮೇಲೆ ಇಡಲ್ಪಟ್ಟ ಹೆಸರು ಶಿವಾಯಿ ಬೇರೆ ಹೆಸರು ಯಿಡುತ್ತಾನೋ ಅಂತಾವನು ಯೆರಡಾಣೇ ಲಾಗಾಯಿತು ಐದು ರೂಪಾಯಿಗಳ ವರಿವಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

49. ಯಾವ ಬೀದಿಯಲ್ಲಾಗಲಿ ಯಿರುವ ಯಾವ ಕಟ್ಟಡವಾದರೂ, ಗೋಡೆಯಾದರೂ, ಅದಕ್ಕೆ ಸೇರಿಸಲ್ಪಟ್ಟ ವಸ್ತುವೇನಾದರೂ, ಹಾಳಾದ ಸ್ಥಿತಿಯಲ್ಲಿರುವದಾಗಿ, ಅಥವಾ ಪ್ರಾಯಶಃ ಬೀಳುವಹಾಗೆ ಯಿರುವದಾಗಿ, ಅಥವಾ ಅಂತಾ ಕಟ್ಟಡದ ವಾಸಸ್ಥರಿಗೆ ಯಾ ಆಸ್‌ಪಾಸ್ ಕಟ್ಟಡಗಳಿಗೆ ಯಾ ಅವುಗಳ ವಾಸಸ್ಥರಿಗೆ, ಯಾ ಅನುಭವದಾರರಿಗೆ ಯಾ ಬೀದೀಯಲ್ಲಿ ಹೋಗತಕ್ಕವರಿಗೆ ಯಾವರೀತಿಯಿಂದಲಾದರೂ ಅಪಾಯಕರವಾಗುವದಾಗಿ ಪ್ರೆಸಿಡೆಂಟರಿಗೆ ತೋರಬಂದರೆ, ಸದರೀ ಪ್ರೆಸಿಡೆಂಟರು ತಮಗೆ ಜರೂರ್ ತೋರಿದರೆ, ಬೀದಿಯಲ್ಲಿ ಹೋಗತಕ್ಕವರ ಕ್ಷೇಮಕ್ಕೋಸ್ಕರ ತಕ್ಕ ಹಲಿಗೆಯನ್ನೂ ಯಾ ಆವರಣವನ್ನೂ, ಕೂಡ್ಲೇ ಹಾಕಿಸತಕ್ಕದ್ದು. ಮತ್ತು ಮಾಲೀಕನು ಫಲಾನೇ ಯವನೆಂತ ತಿಳಿದಿದ್ದು ಅವನು ಮ್ಯುನಿಸಿಪೆಲ್ ಸರಹದ್ದುಗಳೊಳಗೆ ವಾಸ ಮಾಡತಕ್ಕವನಾಗಿ ಯಿದ್ದಲ್ಲಿ, ಅವನಿಗೆ ಬರವಣಿಗೇ ಮೂಲಕ ನೋಟಿಸ್ ಕೊಡಿಸತಕ್ಕದ್ದಲ್ಲದೇ ಅಂತಾ ನೋಟೀಸನ್ನು ಅಂತಾ ಕಟ್ಟಡ ವಗೈರೆಯ ಬಾಗಲಿಗಾಗಲಿ, ಯಿತರ ಪ್ರಸಿದ್ಧವಾದ ಭಾಗದೊಳಗಾಗಲಿ, ಚಿಕಟಾಯಿಸತಕ್ಕದ್ದು, ಅಥವಾ ಅನ್ಯಥಾ, ವಾಸಮಾಡತಕ್ಕವನು ಯಾವನಾದರೂ ಯಿದ್ದರೆ ಅವನಿಗೆ ಕೊಡತಕ್ಕದರಲ್ಲಿ ಸಂದರ್ಭಾನುಸಾರ, ಅಂತಾ ಕಟ್ಟಡವನ್ನು ಯಾ ಗೋಡೆಯನ್ನು ಯಾ ಅದಕ್ಕೆ ಸೇರಿಸಲ್ಪಟ್ಟಿರುವ ವಸ್ತುವನ್ನು ಕೂಡ್ಲೇ ತೆಗದು ಹಾಕುವಂತೆ ಯಾ ಬಂದೋಬಸ್ತು ಮಾಡುವಂತೆ ಯಾ ದುರಸ್ತು ಮಾಡುವಂತೆ ಅಂತಾ ಮಾಲೀಕನಿಗೆ ಯಾ ವಾಸಸ್ಥನಿಗೆ ತಾಕೀದ್ ಮಾಡತಕ್ಕದ್ದು, ಮತ್ತು ಅಂತಾ ಮಾಲೀಕ ಯಾ ವಾಸಸ್ತನು, ಅಂತಾ ನೋಟಿಸ್ ಕೊಟ್ಟ ಮೂರು ದಿವಸಗಳೊಳಗಾಗಿ, ಸದರೀ ಕಟ್ಟಡವನ್ನು ರಿಪೇರ್ ಮಾಡಲಿಕ್ಕೆ ಯಾ ಕಿತ್ತು ಹಾಕಲಿಕ್ಕೆ ಯಾ ಬಂದೋಬಸ್ತು ಮಾಡಲಿಕ್ಕೆ ಶುರು ಮಾಡಿ ಯುಕ್ತವಾದ ಮುತವಜ್ಜೀಯಿಂದ ಪೂರೈಸದೇ ಹೋದಲ್ಲಿ ಪ್ರೆಸಿಡೆಂಟರು, ಸದರೀ ಕಟ್ಟಡ, ಗೋಡೆ, ಯಾ ಯಿತರ ವಸ್ತು ಯಿಂತಾದ್ದರ ಪೈಕೀ ವಿಷ್ಟವನ್ನಾಗಲಿ, ತಾವು ಜರೂರೆಂದು ಭಾವಿಸುವಷ್ಟು ಭಾಗವನ್ನಾಗಲಿ, ಕಿತ್ತು ಹಾಕಿಸತಕ್ಕದ್ದು, ಯಾ ರಿಪೇರ್ ಮಾಡಿಸತಕ್ಕದ್ದು, ಯಾ ಯಿತರ ವಿಧದಿಂದ ಬಂದೋಬಸ್ತು ಪಡಿಸತಕ್ಕದ್ದು. ಹಾಗೆ ಮಾಡಿಸುವದರಲ್ಲಿ ಅವರು ಸದರೀ ಕಟ್ಟಡದ ಸಾಮಾನುಗಳನ್ನು ಸದರೀ ಬಗ್ಗೆ ತಮಗೆ ಯುಕ್ತ ತೋರುವ ಪ್ರಕಾರ ಉಪಯೋಗಿಸಬಹುದು, ಮತ್ತು ಆಬಗ್ಗೆ ಹಿಡಿದ ದರೋಬಸ್ತು ಲಾಗವಡೂ ಸದರೀ ಕಟ್ಟಡ ಮುಂತಾದವುಗಳ ಮಾಲೀಕನಿಂದ ಕೊಡಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ ಮಾಡಲ್ಪಡತಕ್ಕದ್ದು.

50. ಮೇಲೆ ಕಂಡ ಅಧಿಕಾರ ಬಲದಿಂದ ಅಂತಾ ಯಾವ ಕಟ್ಟಣವಾಗಲಿ, ಗೋಡೆಯಾಗಲಿ, ಆ ಪೈಕಿ ಯಾವ ಭಾಗವಾಗಲಿ, ಕಿತ್ತುಹಾಕಲ್ಪಟ್ಟಲ್ಲಿ, ಮೆಂಬರಗಳು ಅದರ ಸಾಮಾನುಗಳನ್ನು, ಅಥವಾ ಆ ಪೈಕಿ ಯೆಷ್ಟು ಕಿತ್ತುಹಾಕಲ್ಪಡುತ್ತೋ ಅಷ್ಟನ್ನು, ಹರಾಜ್ ಹಾಕಿಸಿ ಅಂತಾ ಹರಾಜ್ ಹುಟ್ಟುವಳೀ ಹಣವನ್ನು, ಕಿತ್ತುಹಾಕಿದ ಲಾಗವಡನ್ನ ಕೊಡತಕ್ಕ ಬಗ್ಯೆ, ವಿನಿಯೋಗಿಸಬಹುದು. ಅಂತಾ ವಿಕ್ರಯದ ಮೊಬಲಗಿನ ಪೈಕೀ ಖರ್ಚು ಜಾತಾ ಉಳಿದಿರತಕ್ಕದ್ದನ್ನು ಅಂತಾ ಕಟ್ಟಣದ ಯಾ ಗೋಡೆಯ ಮಾಲೀಕನು ಹರಾಜ್ ತಾರೀಖು ಲಗಾಯ್ತು ಆರು ತಿಂಗಳೊಳಗಾಗಿ ಬಂದು ಕೇಳಿದರೆ ಅವನಿಗೆ ಕೊಟ್ಟುಬಿಡತಕ್ಕದ್ದೇ ಹೊರತು ಅನ್ಯಥಾ ಅವನಿಗೆ ಸಲ್ಲತಕ್ಕದ್ದಲ್ಲವು. ಮೆಂಬರಗಳು, ಅಂತಾ ಸಾಮಾನುಗಳನ್ನು ಮೇಲೆಕಂಡ ಕಾರ್ಯಗಳಿಗೋಸ್ಕರ ವಿಕ್ರಯಿಸದಿದ್ದಾಗ್ಯೂ, ಸದರೀ ಲಾಗವಡಿನ ವಿಷ್ಯ ಮೊಬಲಗನ್ನೂ ಕೊಡುವಂತೆ ಬಲಾತ್ಕರಿಸಲಿಕ್ಕೆ ಅವರಿಗೆ ಈ ಬೈಲಾ ನಿಬಂಧನೆಗಳ ದೆಸೆಯಿಂದ ಯಾವ ಪರಿಹಾರ ಉಂಟುಮಾಡಲ್ಪಟ್ಟಿರುತ್ತೋ ಮೇಲೆಕಂಡ ಹರಾಜ್‌ನಲ್ಲಿ ಹುಟ್ಟಿದ ಮೊಬಲಗನ್ನು ವಿನಿಯೋಗಿಸಿದ್ದು ಜಾತಾ ಬಾಕೀ ಬರಬೇಕಾಗಿರುವಷ್ಟು ಮೊಬಲಗನ್ನು ಕೊಡುವಂತೆ ಬಲಾತ್ಕರಿಸಲಿಕ್ಕೂ ಅದೇ ಪರಿಹಾರ ವುಂಟಾಗಿರತಕ್ಕದ್ದು.

51. ಮ್ಯುನಿಸಿಪೆಲ ಕಮಿಶ್ಶನಿನ ಪ್ರೆಸೀಡೆಂಟರು, ಸೂರ್ಯೋದಯದ ಮೊದಲು, ಸೂರ್ಯಾಸ್ತಮಯದ ಪರ್ಯಂತ ಯಾವಾಗಲಾಗಲಿ, ತಾವಾದರೂ, ತಮ್ಮ ನೌಕರರ ಮಾರಿಫತ್ತಾದರೂ, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ನೋಟಿಸ್ ಕೊಟ್ಟಮೇಲೆ ದರೋಬಸ್ತು ಕಟ್ಟಣಗಳೊಳಗೂ, ಪ್ರವೇಶಿಸಿ ನೋಡುವದು, ವಿಶಿಷ್ಟ ಕಟ್ಟಣವಾಗಲಿ, ಯಾವ ಭಾಗವಾಗಲಿ, ಆರೋಗ್ಯಕ್ಕೋಸ್ಕರ ಕೂಡ್ಲೆ ಒಳಗೂ ಹೊರಗೂ ಸುಣ್ಣ ಬಳಿಸಲ್ಪಡುವಂತೆ ಅಥವಾ ಯಿತರ ರೀತಿಯಿಂದ ಸಾಫ್ ಮಾಡುವಂತೆ ಬರವಣಿಗೇ ಮೂಲಕ ಹುಕ್ಕುಂ ಕೊಡುವದು ಸಹ ಅವರಿಗೆ ನ್ಯಾಯ್ಯವಾಗಿರತಕ್ಕದ್ದು. ಅಂತಾ ಕಟ್ಟಣದ ಮಾಲೀಕ ಯಾ ವಾಸಸ್ಥನು ತನಗೆ ಅಂತಾ ಹುಕ್ಕುಂ ಕೊಡೋಣಾದ್ದು ಮೊದಲು ಯೆಂಟುದಿನಗಳೊಳಗಾಗಿ ಆ ಮೇರೆ ಸಾಫ್ ಮಾಡಿಸಲಿಕ್ಕೆ ಉಪೇಕ್ಷಿಸಿದರೆ, ಪ್ರೆಸೀಡೆಂಟರು ಆ ಕೆಲಸ ಮಾಡಿಸಬಹುದು, ಮತ್ತು ಆಬಗ್ಯೆ ಹಿಡಿದ ಲಾಗವಡು ಸದರೀ ಮಾಲೀಕ ಯಾ ವಾಸಸ್ಥನಿಂದ ಕೊಡಿಸಲ್ಪಟ್ಟು, ಯಿದರಲ್ಲಿ ಮುಂದೆ ವಿಧಿಸಲ್ಪಟ್ಟ ಮೇರೆ ವಸೂಲ್ ಮಾಡಲ್ಪಡತಕ್ಕದ್ದು. ಮ್ಯುನಿಸಿಪೆಲ ಇಲಾಖೆಯ ಸ್ಯಾನಿಟರಿ ಯಿನ್ಸ್‌ಪೆಕ್ಟರ್ ಎಂಬ ಅಧಿಕಾರಿಯು ರೋಗ ನಿಮಿತ್ತಗಳಾದ ಕಟ್ಟಣಗಳನ್ನು, ಹೊಗೆ ಹಾಕಿಸುವ ಬಗ್ಯೆ ಅಥವಾ ರೋಗ ವ್ಯಾಪನೆಯ ನಿಮಿತ್ತವನ್ನು ನಿವರ್ತಿ ಮಾಡುವ ಬಗ್ಯೆ ಮುಚ್ಚಿಸತಕ್ಕದ್ದು. ಪ್ರೆಸೀಡೆಂಟರ ಬರವಣಿಗೆಯ ಮೂಲಕ ಮಂಜೂರಾತಿಯನ್ನು ಅನುಸರಿಸಿ ಅಂತಾ ಕ್ರಮಗಳನ್ನು ಏರ್ಪಡಿಸತಕ್ಕದ್ದು.

52. ಯಾವ ಕಟ್ಟಣವಾದರೂ, ವಾಸಸ್ಥರ ಆರೋಗ್ಯಕ್ಕೆ ಅಪಾಯಕರವಾಗಿ ಅಥವಾ ಬಾಧಕವಾಗುವಷ್ಟು ಜನದಿಂದ ನಿಬಿಡವಾಗಿದೆಯೆಂತ ಸದರೀ ಮನೆಯಲ್ಲಿ ಒಂದು ವಕ್ಕಲಿಗಿಂತ ಹೆಚ್ಚಾಗಿ ಇರುವ ಎಗಿ ಮ್ಯುನಿಸಿಪೆಲ ಬೋರ್ಡಿನ ಪ್ರೆಸೀಡೆಂಟರಿಗೆ ಸ್ಯಾನಿಟೇರಿ ಇನ್ಸ್‌ಪೆಕ್ಟರವರು ಸೆರಟಫೈ ಮಾಡುವಲ್ಲಿ, ಪ್ರೆಸೀಡೆಂಟರು, ಅಂಥಾ ಜನ ಸಮ್ಮರ್ದವನ್ನು ತಗ್ಗಿಸುವಬಗ್ಯೆ ಮಾಜಿಸ್ಟ್ರೇಟರಲ್ಲಿ ನಡವಳಿತ ನಡಿಸತಕ್ಕದ್ದು. ಮಾಜಿಸ್ಟ್ರೇಟರು ಅದರ ಮೇಲೆ ತಮಗೆ ಯುಕ್ತತೋರುವ ಹುಕ್ಕುಂ ಕೊಡತಕ್ಕದ್ದು. ಅಂತಾ ಜನ ಸಮ್ಮರ್ದವನ್ನು ಅಂಗೀಕರಿಸುವ ಮನುಷ್ಯನು ಅಂತಾ ಹುಕ್ಕುಂ ತಾರೀಖು ತರುವಾಯ ಹಾಗೆ ಜನ ಸಮ್ಮರ್ದವಿರುವ ಪ್ರತಿದಿನಕ್ಕೂ, ಒಂದು ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

53. ಯಾವದಾದರೂ ಜಮೀನಿನಲ್ಲಿಂತಕ್ಕ ಬೇಲೀಗಳು ಭೂಮಿಯಮಟ್ಟದಿಂದ ಆರಡಿಯ ಎತ್ತರಕ್ಕೆ ಮೀರದಹಾಗೆ ಅವುಗಳನ್ನು ಕತ್ತರಿಸುವಂತೆ, ಯಾ ಕೊಂಬೆಗಳು ಕಡಿಯುವಂತೆ, ಮತ್ತು ಯಾವದಾದರೂ ಪಬ್ಲಿಕರಸ್ತೆ ಅಥವಾ ಬೀದಿಯಮೇಲೆ ವಾಲಿಇರುವದರಿಂದ ದಾರಿಗೆ ಅಟಕಾವ್‌ಆಗುವಂತಾ, ಅಥವಾ ಲುಕ್ಸಾನ್ ಆಗುವಂತಾ, ದರೋಬಸ್ತು ಮರಗಳನ್ನೂ ಕಡಿಯುವಂತೆಯೂ, ಕತ್ತರಿಸುವಂತೆಯೂ, ಮಾಲೀಕನು ಫಲಾನೆಯವನೆಂತ ತಿಳಿದಿದ್ದು ಅವನು ಮ್ಯುನಿಸಿಪೆಲ ಸರಹದ್ದುಗಳೊಳಗೆ ವಾಸ ಮಾಡುತಿದ್ದರೆ, ಅಂತವನಿಗೂ, ಅವರ ಅನುಭವದಾರನಿಗೂ, ಪ್ರೆಸೀಡೆಂಟರು ಬರವಣಿಗೆಯ ಮೂಲಕ ನೋಟಿಸ್ ಕೊಡಬಹುದು. ಅಂತಾ ನೋಟಿಸ್‌ನಲ್ಲಿ ಕಂಡ ತಾರೀಖುಲಾಗಾಯತ್ ಎಂಟುದಿನಗಳೊಳಗಾಗಿ, ಅದರಂತೆ ನಡೆಯದೇ ಇದ್ದ ಪಕ್ಷಕ್ಕೆ ಮಾಲೀಕನಾಗಲಿ, ಅನುಭವದಾರನಾಗಲಿ, ಮಾಜಿಸ್ಟ್ರೇಟರಮುಂದೆ ತಕಸೀರ್ ಆಪಾದನೆಪಟ್ಟು 2 ರೂಪಾಯಿಗಳ ಲಗಾಯತ್ 5 ರೂಪಾಯಿಗಳವರೆಗೆ ಒಂದು ಜುರ್ಮಾನೆಗೂ, ಮತ್ತು ಅಂತಾ ತಕಸೀರಿಗಾಗಿ ಆಪಾದನೆ ಆದಮೇಲೆ ಸದರೀ ತಕಸೀರ್ ನಡೆಯುತ್ತಿರುವ ಪ್ರತಿದಿನಕ್ಕೂ, ಒಂದುರೂಪಾಯಿ ಮೊದಲು ಹತ್ತು ರೂಪಾಯಿಗಳ ವರೆಗೆ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

54. ಕ್ರಮಪ್ರಕಾರ ನೋಟಿಸ್ ಕೊಡಲ್ಪಟ್ಟತರುವಾಯ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಪ್ರೆಸೀಡೆಂಟರಿಂದ ಲೈಸೆನ್ಸ್ ಪಡೆಯದೆ ಮ್ಯುನಿಸಿಪೆಲ್ ಸರಹದ್ದಿನೊಳಗೆ ಒಂದು ಸ್ಥಳದಲ್ಲಿ ಯಾವದಾದರೂ ಬಾಡಿಗೇ ಕುದುರೆಗಳ ಯಾ ಬಂಡಿಗಳ ತಬೇಲೀಗಳು, ಕುದುರೆಲೈನ್‌ಗಳು, ಕುದುರೇ ಚಿಕಿತ್ಸೇಶಾಲೆಗಳು ಬಂಡಿಮಿಟ್ಟೆಗಳು, ದನಗಳ ಕೊಟ್ಟಿಗೆಗಳು ಅಥವಾ, ಪಬ್ಲಿಕ್ಕಾಗಿ ಬಂದು ಇಳಿದುಕೊಳ್ಳುವ ಬಗ್ಯೆ ಜೋಡಾದ ದೊಡ್ಡಿಗಳು, ಇಪ್ಪತ್ತಕ್ಕೆ ಮೀರಿದ ಕುರಿ, ಮೇಕೆ, ಯಾ ಹತ್ತಕ್ಕೆ ಮೀರಿದ ಕೊಂಬುಗಳುಳ್ಳ ಜಾನವರಗಳು ಇಂತಾವುಗಳಿಗೆ ಸ್ವಂತಗಾರನಾಗಿರುವ, ಯಾ ಇವುಗಳನ್ನು ಇಟ್ಟು ಇರುವ ಯಾವನಾಗಲಿ 2 ಆಣೆ ...ಮೊದಲು, 5 ರೂಪಾಯಿಗಳವರೆಗೆ ಒಂದು ಜುರ್ಮಾನೆಗೂ, ಅಂತಾ ತಕಸೀರಿಗಾಗಿ ಆಪಾದನೆಆದಮೇಲೆ ಅಂತಾ ತಕಸೀರ್ ನಡಿಸ...ುವ ಪ್ರತಿದಿನಕ್ಕೂ 1 ರೂಪಾಯಿಗೆ ಮೀರದ ಜುರ್ಮಾನೆಗೂ ಗುರಿಯಾಗತಕ್ಕದ್ದು.

55. ಯಾವ ಬೀದಿಯಲ್ಲಾಗಲಿ ಅದರ ಸಮೀಪದಲ್ಲಾಗಲಿ, ಪ್ರೆಸೀಡೆಂಟರ ಅಭಿಪ್ರಾಯ ಪ್ರಕಾರ ಆಸ್‌ಪಾಸ್ ಜನಗಳಿಗೆ ಬಾಧಕವಾಗುತ್ತೆಂದು ತೋರುವ ಯಾವ ಹಂದಿಗಳನ್ನಾಗಲಿ ಯಾವನು ಇಡುತ್ತಾನೋ ಅವನು 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ ಬಂದು ಜುರ್ಮಾನೆಗೂ, ಅಂತಾ ತಕ್ಸೀರ್ ಸ್ಥಾಪನೆಯಾದ ಮೇಲೆ ಸದರೀ ತಪ್ಪಿತ ನಡಿಸಲ್ಪಡುತ್ತಿರುವ ಪ್ರತಿದಿನಕ್ಕೂ 5 ರೂಪಾಯಿಗೆ ಮೀರದ ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದಲ್ಲದೆ, ಮತ್ತು ತೊಂಡಾಗಿ ತಿರುಗುವ ಯಾವ ಹಂದಿಯನ್ನಾಗಲಿ ಪ್ರೆಸೀಡೆಂಟರ ಹುಕ್ಕುಂ ನಿಶೀ, ಯಾವ ನುಕ್ಸಾನ್ ಬಾಬತು ವ್ಯಾಜ್ಯಕ್ಕೂ ಆಸ್ಪದ ಉಂಟಾಗದಂತೆ ಪೂಟಾಗಿ ಕೊಂದು ಹಾಕ ಬಹುದು.

56. ಈ ಬೈಲಾ ನಿಬಂಧನೆಗಳು ಜಾರೀಲಿ ಬರುವ ಕಾಲದಲ್ಲಿ ಬೀದಿಗಳಲ್ಲಿ ಯಾ ರಸ್ತೆಗಳಲ್ಲಿ, ಯಾ ಅವುಗಳ ಮಾರ್ಗವಾಗಿ ಯಾ ಕೆಳಗಡೆಗೆ, ಇರುವಂತಾ, ಅಥವಾ ತರುವಾಯ ಕಲ್ಪಿಸಲ್ಪಡುವಂತಾ ದರೋಬಸ್ತು ಪಬ್ಲಿಕ್ ಬಚ್ಚಲುಗಳು, ಚರಂಡೀಗಳು, ಮತ್ತು ತಮಾಂ ಬಚ್ಚಲುಗಳು, ಚರಂಡೀಗಳು, ನಲ್ಲೀಗಳು, ಮೊಹರೀಗಳು ಸಹ ಮೆಂಬರ್‌ಗಳ ಲಾಗವಡಿನಿಂದ ಮಾಡಲ್ಪಟ್ಟದ್ದಾಗಿರಲಿ, ಅನ್ಯಥಾ ಆದ್ದಾಗಿರಲಿ, ಅಂತಾ ಕೆಲಸಗಳು, ಅವುಗಳಿಗೆ ಸಂಬಂಧಿಸಿದ ದರೋಬಸ್ತು ಕೆಲಸಗಳು ಸಾಮಾನುಗಳು, ಪದಾರ್ಥಗಳೆ ಮೆಂಬರುಗಳ ವಶದಲ್ಲಿಡಲ್ಪಟ್ಟು ಅವರಿಗೆ ಸೇರಿದ್ದಾಗಿರತಕ್ಕದ್ದು.

57. ಮ್ಯುನಿಸಿಪಲ್ ಸರಹದ್ದುಗಳ ಜಲಧಾರೇ ನೀರು ಹರಿಯುವ ಬಗ್ಗೆ ಯಾವದಾದರೂ ಮುಖ್ಯ ಮೊಹರೀಗಳನ್ನಾಗಲಿ, ಇತರ ಮೊಹರೀಗಳನ್ನಾಗಲಿ ಮಾಡಿಸುವಲ್ಲಿ ಮೆಂಬರ್‌ಗಳು, ಜರೂರಿದ್ದರೆ, ಯಾವದಾದರೂ ಬೀದಿಯ ಅಥವಾ ರಸ್ತೆಯ ಅಥವಾ ಬೀದಿಯಾಗಿ ಯಾ ರಸ್ತೆಯಾಗಿ ಏರ್ಪಡಿಸಲ್ಪಟ್ಟ ಯಾ ಉದ್ದೇಶಿಸಲ್ಪಟ್ಟ, ಅಥವಾ ಬೀದಿಗಳ ಪೈಕಿ ಯಾವದರ ಕೆಳಗಾಗಲಿ, ಆವರಣ ಕಲ್ಪಿಸಲ್ಪಟ್ಟ ಯಾ ಇತರ ವಿಧವುಳ್ಳ ಜಮೀನಿನಲ್ಲಿ, ಅದರ ಮಾರ್ಗವಾಗಿ ಯಾ ಕೆಳಗಡೆಗೆ ಇರುವ ಯಾವದಾದರೂ ನೆಲಮಾಳಿಗೆ ಕಮಾನು ಬಗ್ಗಿಸಿಯಿರುವ ನೆಲಮಾಳಿಗೆ ಇಂತಾದ್ದರ ಮಾರ್ಗವಾಗಿ, ಯಾ ಅಡ್ಡವಾಗಿ ಯಾ ಕೆಳಗಡೆಗೆ, (ಆ ವಿಷಯವನ್ನು ಕುರಿತು ತಕ್ಕ ವಾಯಿದೆನಿಶೀ ಬರವಣಿಗೇ ಮೂಲಕ ನೋಟಿಸ್ ಕೊಡಲ್ಪಟ್ಟ ತರುವಾಯ ಅಂತಾ ಬಚ್ಚಲುಗಳನ್ನು ತೆಗದುಕೊಂಡು ಹೋಗಬಹುದು. ಹಾಗೆ ಮಾಡುವದರಿಂದುಂಟಾಗುವ ಯಾವ ನುಕ್ಸಾನಿಗಾಗಲಿ ಪೂರಾ ಈಡು ಕಟ್ಟಿಕೊಡತಕದ್ದು ಅಂತಾ ಈಡು ಮೊಬಲಗ್ ವಿಷಯದಲ್ಲಾಗಲಿ ಅದನ್ನು ಹಂಚಿಕೆ ಮಾಡಿಕೊಡುವ ಅಂಶದಲ್ಲಾಗಲಿ ಯೇನಾದರೂ ತಕರಾರ್ ಉಂಟಾದ ಪಕ್ಷಕ್ಕೆ ನುಕ್ಸಾನ ಲಾಗವಡುಗಳು ಇವುಗಳನ್ನು ಕುರಿತು ತಕರಾರ್ ವ್ಯವಸ್ಥೆ ಬಗ್ಗೆ ಯಿದರಲ್ಲಿ ಮುಂದೆ ವಿಧಿಸಲ್ಪಟ್ಟರೀತಿಯಾಗಿ ಫೈಸಲ್ ಆಗತಕ್ಕದ್ದು.

58. ಈ ಬೈಲಾನಿಬಂಧನೆಗಳ ದೆಸೇಯಿಂದ ತಮ್ಮ ಸುಪರ್ದ್‌ಮಾಡೋಣಾದ ಬಚ್ಚಲುಗಳು, ಯಾ ಚರಂಡೀಗಳು, ಇವುಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ ಕಾಪಾಡತಕ್ಕದ್ದು, ಆಗಿಂದಾಗ್ಯೆ ದುರಸ್ತುಪಡಿಸತಕ್ಕದ್ದು. ಮತ್ತು ತಮಗೆ ಯುಕ್ತ ತೋರುವ ಮೇರೆ ವಿಸ್ತಾರಪಡಿಸತಕ್ಕದ್ದು, ಬದಲಾವಣೆಮಾಡತಕ್ಕದ್ದು, ಯಾ ಮೇಲ್ಗಡೆ ಕಮಾನು ಕಟ್ಟಿಸತಕ್ಕದ್ದು ಯಾ ಇತರ ವಿಧದಿಂದ ಅಭಿವೃದ್ಧಿ ಮಾಡಕ್ಕದ್ದು, ಮತ್ತು ಆ ಪೈಕಿ ಯಾವ ಭಾಗ ತಮಗೆ ನಿಷ್ಪ್ರಯೋಜಕವೆಂತಲೂ ಅನಾವಶ್ಯಕವೆಂತಲೂ, ತೋರುತ್ತೋ ಆ ಭಾಗವನ್ನು ಮೊಕೂಫ್ ಮಾಡಬಹುದು, ಮುಚ್ಚಿಸಿಬಿಡಬಹುದು ಯಾ ನಾಶಮಾಡಬಹುದು, ಪರಂತು, ಈ ಸೆಕ್ಷನ್ ಅನುಸರಿಸಿ ಯಾವ ಅಂಶವಾಗಲಿ ಮಾಡಲ್ಪಟ್ಟತೆಂಬ ಸಬಬಿನ ಮೇಲೆ ಯಾವ ಮನುಷ್ಯನಾಗಲಿ ಯಾವದಾದರೂ ಬಚ್ಚಲು ಯಾ ಚರಂಡಿಯನ್ನು ನ್ಯಾಯ್ಯವಾಗಿ ಉಪಯೋಗಿಸುವದಕ್ಕೆ ತಪ್ಪಿಸಲ್ಪಟ್ಟರೆ ಮೆಂಬರ್‌ಗಳು ತಮ್ಮ ಬಚ್ಚಲುಗಳ ನೀರು ಯಾವ ಸ್ಥಳದಲ್ಲಿ ಬಿಡುವದಕ್ಕೆ ಅಧಿಕಾರ ಪಡೆದಿರುತ್ತಾರೋ ಅಂತಾ ಯಾವದಾದರೂ ಪಬ್ಲಿಕ್ ಬಚ್ಚಲ್‌ನಲ್ಲಿಯಾಗಲಿ ಇತರ ಸ್ಥಳದಲ್ಲಿಯಾಗಲಿ, ಸದರೀ ಬಚ್ಚಲು ನೀರು ಹರಿಯುವ ಬಗ್ಗೆ ಸಾಧನವನ್ನು ತಮ್ಮ ಲಾಗವಡಿನಿಂದ ಕಲ್ಪಿಸತಕ್ಕದ್ದು.

59. ಮೆಂಬರ್‌ಗಳು ತಮಗೆ ಸೇರಿದ ಬಚ್ಚಲುಗಳೂ ಚರಂಡೀಗಳೂ, ಅಸಹ್ಯವಾಗಿಯೂ, ಅನಾರೋಗ್ಯಕರವಾಗಿಯೂ ಇರದಂತೆ ತಮ್ಮಲ್ಲಿ ಐವಜು ಅನುಕೂಲಿಸಿದಷ್ಟು ಮಟ್ಟಿಗೆ ಕಟ್ಟಿಸತಕ್ಕದ್ದು, ಕಾಪಾಡತಕ್ಕದ್ದು, ಇಡಿಸತಕ್ಕದ್ದು. ಮತ್ತು ಕ್ರಮ ಪ್ರಕಾರ ಪಾಕ್ ಮಾಡಿಸತಕ್ಕದ್ದು, ಶೋಧಿಸತಕ್ಕದ್ದು, ಮತ್ತು ಖಾಲೀ ಮಾಡಿಸತಕ್ಕದ್ದು. ಸದರೀ ಬಚ್ಚಲುಗಳನ್ನು ನೀರು ವಾಟಮಾಡಲಿಕ್ಕೂ ಶುದ್ಧಪಡಿಸಲಿಕ್ಕೂ. ಖಾಲೀ ಮಾಡಲಿಕ್ಕೂ ಭೂಮಿಯ ಮೇಲಾಗಲಿ, ಕೆಳಗಾಗಲಿ, ಜರೂರಾದ ತೊಟ್ಟಿವಗೈರೆಗಳನ್ನು ತೂಬುಗಳನ್ನೂ, ಯಂತ್ರಗಳನ್ನೂ, ಮತ್ತು ಜರೂರಾದ ಇತರ ಕೆಲಸಗಳನ್ನೂ ಅವರು ಕಟ್ಟಿಸಬಹುದು. ಇಡಿಸಬಹುದು, ಮತ್ತು ಚೀಫ್ ಕಮ್ಮಿಷನರವರ ಮಂಜೂರಾತೀನಿಶೀ ಅಂತಾ ಬಚ್ಚಲುಗಳು, ಯಾ ಚರಂಡಿಗಳು ಇವುಗಳ ಪೈಕಿ ವಿಶಿಷ್ಟವನ್ನಾಗಲಿ, ಯಾವದನ್ನಾಗಲಿ, ಯಾವದಾದರೂ ತಕ್ಕ ಸ್ಥಳದೊಡನೆ ಸೇರುವಂತೆ ಮತ್ತು ಅಂತಾ ಸ್ಥಳದಲ್ಲಿ ಹೋಗಿ ಬೀಳುವಂತೆ ಮಾಡಬಹುದು, ಅಥವಾ ಅಂತಾ ಬಚ್ಚಲಗಳ ದೆಸೆಯಿಂದಲೂ ಚರಂಡೀಗಳ ದೆಸೆಯಿಂದಲೂ, ಬರುವ ಕಶ್ಮಲವನ್ನು ಜಮಾಯಿಸಿಯಿಡುವ ಬಗ್ಗೆ ಕೇವಲ ಅನುಕೂಲವಾದ ಪ್ರದೇಶಕ್ಕೆ ಸರಿಯಾದ ಮಾರ್ಗದಿಂದ ತೆಗದುಕೊಂಡು ಹೋಗುವಂತೆ ಮಾಡಬಹುದು. ಮತ್ತು ಕೇವಲ ಜರೂರೆಂತ ಯೆಣಿಸುವ ವ್ಯವಸಾಯದ ಕೆಲಸಗಳಿಗಾಗಲಿ, ಇತರ ಕಾರ್ಯಗಳಿಗಾಗಲಿ ವಿಕ್ರಯಿಸಿ ಬಿಡಬಹುದು. ಆದರೆ ಹಾಂಗೆ ಉಪಯೋಗಿಸುವದರಿಂದ ಹೇಸಿಕೆಯುಂಟಾಗದೆ ಇರತಕದ್ದು.

60. ಪ್ರೆಸೀಡೆಂಟರ ಬರವಣಿಗೇ ಮೂಲಕವಾದ ಅನುಮತಿಯನ್ನು ಮೊದಲು ಪಡಕೊಳ್ಳದೆ, ಈ ಬೈಲಾನಿಬಂಧನೆಗಳ ದೆಸೇಯಿಂದ ಮೆಂಬರ್‌ಗಳ ವಶದಲ್ಲಿ ಇಡೋಣಾದ ಬಚ್ಚಲುಗಳು ಚರಂಡೀಗಳು ಇವುಗಳ ಪೈಕಿ ಯಾವದರಲ್ಲಾಗಲಿ ಯಾವನು ಯಾವ ಚರಂಡೀಯನ್ನಾದರೂ ಮಾಡುತ್ತಾನೋ ಯಾ ಮಾತಿಸುತ್ತಾನೋ ಅಥವಾ ಯಾವದಾದರೂ ಪಬ್ಲಿಕ್ ಚರಂಡೀಯಾಗಲಿ ಬಚ್ಚಲಾಗಲೀ ಸರ್ಕಾರೀ ಜಮೀನ್ಮಾರ್ಗವಾಗಿ ಹರಿಯಲೀ ಜನಗಳ ಸ್ವಂತ ಜಮೀನ್ಮಾರ್ಗವಾಗಿ ಹರಿಯಲೀ ಪರಂತು ಅಂತಾದ್ದನ್ನು ಯಾವನು ಬಂದ್ ಮಾಡುತಾನೋ ತಿರಿಗಿಸುತ್ತಾನೋ ಅಟಕಾವ್ ಮಾಡುತ್ತಾನೋ ಅಥವಾ ಮತ್ಯಾವ ವಿಧದಿಂದಲಾಗಲಿ, ಪ್ರವರ್ತಿಸುತ್ತಾನೋ ಅಂತಾ ಮನುಷ್ಯನು 1 ರೂಪಾಯಿ ಮೊದಲು 5 ರೂಪಾಯಿಗಳವರಿಗೆ ಬಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಪ್ರೆಸಿಡೇಂಟರು ಅಂತಾ ಚರಂಡೀಯನ್ನಾಗಲಿ ಅಟಕಾವನ್ನಾಗಲಿ, ತಮಗೆ ಯುಕ್ತತೋರುವ ಪ್ರಕಾರ ನಾಶ ಪಡಿಸಬಹುದು, ಬದಲಾವಣೆ ಮಾಡಿಸಹುದು, ಹೊಸದಾಗಿ ಮಾಡಿಸಬಹುದು. ಅಥವಾ ಅನ್ಯಥಾ ತಮಗೆ ಯುಕ್ತತೋರುವ ಪ್ರಕಾರ ನಡಿಸಬಹುದು. ಆ ಬಗ್ಯೆ ಹಿಡಿದ ದರೋಬಸ್ತು ಲಾಗವಡೂ ಅಂಥಾ ಪ್ರೂಟ ಚರಂಡಿಯನ್ನು ಯಾ ಅಟಕಾವನ್ನೂ ಮಾಡಿದಂತಾ ಯಾ ಮಾಡಿಸಿದಂತಾ ಮನುಷ್ಯನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಲ್ಪಡತಕ್ಕದ್ದು.

61. ಈ ಬೈಲಾನಿಬಂಧನೆಗಳಿಂದ ಮೆಂಬರ್‌ಗಳವಶದಲ್ಲಿ ಇಡೋಣಾದ ಯಾವ ಬಚ್ಚಲು ಯಾ ಚರಂಡಿಯ ಮೇಲಾಗಲಿ ಪ್ರೆಸೀಡೆಂಟರ ಅನುಮತೀ ಇಲ್ಲದೆ ಯಾವ ಕಟ್ಟಣವನ್ನೂ ಹೊಸದಾಗಿ ಕಟ್ಟತಕ್ಕದ್ದಲ್ಲವು, ಮತ್ತು ಯಾವ ಕಟ್ಟಣವಾಗಲಿ ಆ ಮೇರೇ ಕಟ್ಟಲ್ಪಟ್ಟಲ್ಲಿ ಪ್ರೆಸೀಡೆಂಟರು ಅಂತಾ ಕಟ್ಟಣವನ್ನು ಕಿತ್ತಿ ಹಾಕಿಸಬಹುದು. ಅಥವಾ ತಮಗೆ ಯುಕ್ತತೋರುವ ಪ್ರಕಾರ ಇತರ ರೀತಿಯಿಂದ ನಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವಡನ್ನು ತಕಶೀರ್ ನಡಿಸಿದ ಮನುಷ್ಯನು ಕೊಡತಕದ್ದಲ್ಲದೆ. ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್ಮಾಡಿ ಕ್ಕೊಳ್ಳಲ್ಪಡತಕ್ಕದ್ದು.

62. ಯಾವ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಮತ್ತು ಉಪಯೋಗಿಸಲಿಕ್ಕೆ ಅರ್ಹವಾದ ಬಚ್ಚಲಿಗೆ ಅಥವಾ ಮೆಂಬರ್‌ಗಳು ತಮ್ಮ ಬಚ್ಚಲುಗಳ ನೀರನ್ನು ಯಾವದರಲ್ಲಿ ಬಿಡಲಿಕ್ಕೆ ಅಧಿಕಾರ ಉಂಟಾಗಿರುತ್ತಾರೋ ಅಂತಾ ಯಾವದಾದರೂ ಸ್ಥಳಕ್ಕೆ ಯುಕ್ತವಾದ ದೂರದಲ್ಲಿ ಇರುವ ಯಾವದಾದರೂ ಕಟ್ಟಣವು ಯಾವಾಗಲಾಗಲಿ, ತಕ್ಕ ಚರಂಡೀಯಿಂದ ಯಾ ನಲ್ಲೀಯಿಂದ ಯಾವದಾದರೂ ಬಚ್ಚಲಿಗೆ ಅಥವಾ ಮೇಲೆ ಕಂಡಂತೆ ಇತರ ಸ್ಥಳಕ್ಕೆ ಹೋಗಿ ಸೇರುವಂತೆ ಪ್ರೆಸೀಡೆಂಟರಿಗೆ ತೃಪ್ತಿಕರವಾಗಿ ಚರಂಡೀ ಇಡಲ್ಪಡದೇ ಇರುವ ಪಕ್ಷಕ್ಕೆ ಪ್ರೆಸೀಡೆಂಟರು, ನೋಟಿಸ್ ಕೊಡೋಣಾದ ಹದಿನೈದು ದಿನಗಳೊಳಗಾಗಿ ಮಾಲೀಕನು ಆ ಮೇರೆ ಮಾಡಿಸಲಿಕ್ಕೆ ಉಪೇಕ್ಷಿಸಿದ ಪಕ್ಷಕ್ಕೆ, ಅಂತಾ ಕಟ್ಟಣದ ದೆಸೆಯಿಂದ ಬಚ್ಚಲು ಹರಿಯಲಿಕ್ಕೆ ಜರೂರೆಂತ ತಮಗೆ ತೋರುವಂತಾ ಸಾಮಾನ್ಗಳ ದೆಸೆಯಿಂದ ಅಷ್ಟರ ಆಕಾರದಲ್ಲಿ, ಅಷ್ಟರಮಟ್ಟಕ್ಕೆ, ಮತ್ತು ಅಂತಾ ನೀರು ವಾಟದಲ್ಲಿ ಮುಚ್ಚಲ್ಪಟ್ಟ, ಯಾ ಖುಲ್ಲಾಯಿರುವ ಚರಂಡಿಯನ್ನಾಗಲಿ, ನಲ್ಲೀಯನ್ನಾಗಲಿ ಅಂತಾ ಕಟ್ಟಣದಿಂದ ಕಟ್ಟಿಸಬಹುದು, ಅಥವಾ ಏರ್ಪಡಿಸಬಹುದು, ಮತ್ತು ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೂಡ್ಲೇ ಕೊಡಲ್ಪಡದ ಪಕ್ಷಕ್ಕೆ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

63. ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ, ಅಂತಾ ಕಟ್ಟಣದ ಬಚ್ಚಲ ನೀರು ಆಗ್ಯೆ ಇರುವಂತಾ ಅಥವಾ ಯೇರ್ಪಾಡು ಮಾಡಲ್ಪಡುವಂತಾ ಯಾವದಾದರೂ ಪಬ್ಲಿಕ್ ಬಚ್ಚಲುನಲ್ಲಿಯೂ, ಮೆಂಬರ್‌ಗಳು ತಮ್ಮ ಬಚ್ಚಲುಗಳನ್ನು ಬಿಡುವದಕ್ಕೆ ಅಧಿಕಾರ ಪಡೆದಿರುವ ಇತರ ಸ್ಥಳಕ್ಕೂ ತೆಗದುಕೊಂಡು ಹೋಗಲಿಕ್ಕೆ ತಕ್ಕ ನೀರು ಮಟ್ಟಕ್ಕಿಂತ ತಗ್ಗಾದ ನೀರು ಮಟ್ಟದಲ್ಲಿ ಇನ್ನು ಮೇಲೆ ಯಾವ ಕಟ್ಟಣವೂ ಕಟ್ಟಲ್ಪಡತಕ್ಕದ್ದಲ್ಲವು ಮತ್ತು ಪಬ್ಲಿಕ್ ಬೀದಿ ಯಾ ರಸ್ತೆಗೆ ಅಂಚಿನಲ್ಲಿರುವ ಜಮೀನ್ ಯಾ ಕಟ್ಟಣಗಳ ಮಾಲೀಕರು ಯಾ ಅನುಭವದಾರರು, ಪ್ರೆಸೀಡೆಂಟರಿಂದ ನಿಯಮಿಸಲ್ಪಡುವ ಸಾಕಾದ ಪರಿಮಾಣ, ಮತ್ತು ಸಾಮಾನುಗಳಿಂದ ಮೊಹರಿಗಳನ್ನು, ತಮ್ಮ ಜಮೀನಿನ ಯಾ ಕಟ್ಟಣಗಳ ಮೊದಲಿನಲ್ಲಿ ಇರುವ ಬಾಜೂಕಾಲ್ವೆಗಳ ಮೇಲಾಗಲಿ, ಹಳ್ಳಗಳ ಮೇಲಾಗಲಿ ಕಟ್ಟತಕ್ಕದ್ದು, ಬದಲಾವಣೇ ಮಾಡತಕ್ಕದ್ದು, ಕಾಪಾಡತಕ್ಕದ್ದು, ಮತ್ತು ನೋಟಿಸ್ ಕೊಡೋಣಾದ ಹದಿನೈದು ದಿನಗಳೊಳಗಾಗಿ ಅವರು ಆ ಮೇರೆ ಮಾಡದೇ ಅಶ್ರದ್ಧೆಮಾಡಿದ ಪಕ್ಷಕ್ಕೆ ಪ್ರೆಸೀಡೆಂಟರು ಅದನ್ನು ಮಾಡಿಸಬಹುದು, ಆ ಬಗ್ಯೆ ಹಿಡಿದ ಲಾಗವಡುಗಳನ್ನು ಸದರೀ ಮಾಲೀಕರಾಗಲಿ, ಅನುಭವದಾರರಾಗಲಿ ಕೊಡತಕ್ಕದ್ದಲ್ಲದೆ ಆ ಮೊಬಲಗ್ ಯಿದರಲ್ಲಿ ಮುಂದೆ ವಿಧಿಸಲ್ಪಟ್ಟಿರುವ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು.

64. ಈ ಬೈಲಾ ನಿಬಂಧನೆಗಳು ಜಾರೀಲಿ ಬಂದಬಳಿಕ ಯಾವದಾದರೂ ಬೀದಿಯಲ್ಲಿ ಯಾ ಬೀದಿಯ ಸಮೀಪದಲ್ಲಿ ಹೊಸದಾಗಿ ಕಟ್ಟೋಣಾದ ಅಥವಾ ಪುನಶ್ಚ ಕಟ್ಟೋಣಾದ ಯಾವ ಕಟ್ಟಣವಾಗಲಿ, ಇದರ ಹಿಂದಿನ ಕಡೇ ಸೆಕ್ಷನ್‌ನಲ್ಲಿ ಕಂಡಂತೆ ಅದಕ್ಕೆ ನೂರು ಅಡಿಗಳೊಳಗೆ ಬಚ್ಚಲು ನೀರು ಹರಿಯಲಿಕ್ಕೆ ಆಧಾರ ಇದ್ದಪಕ್ಷಕ್ಕೆ ಅದರ ಮಾಲೀಕನು ಅಂತಾ ಕಟ್ಟಣದ ನಿವೇಶನದ ದೆಸೇಯಿಂದ ಅದರೊಳಕ್ಕೆ ಹರಿಯುವಂತೆ ಪ್ರೆಸೀಡೆಂಟರು ನಿಯಮಿಸುವ ಸಾಮಾನುಗಳಿಂದಲೂ, ಆಪ್ರಮಾಣದಿಂದಲೂ, ಅಂತಾ ಮಟ್ಟದಲ್ಲಿಯೂ, ಅಂತಾ ನೀರುವಾಟದಿಂದಲೂ, ಒಂದು ಚರಂಡೀ ಕಟ್ಟಿಸತಕ್ಕದ್ದು ಅಂತಾ ಮಾಲೀಕನು ಯುಕ್ತವಾದ ಕಾಲದೊಳಗಾಗಿ ಆಮೇರೆ ಕಟ್ಟಲಿಕ್ಕೆ ಉಪೇಕ್ಷಿಸಿದಪಕ್ಷಕ್ಕೆ, ಪ್ರೆಸೀಡೆಂಟರು ಸದರೀ ಚರಂಡೀ ಕಟ್ಟಿಸಲ್ಪಡುವಂತೆ ಮಾಡಬಹುದು

ಮತ್ತು ಆಬಗ್ಯೆ ಹಿಡಿದಲಾಗವಡುಗಳು ಮಾಲೀಕನಿಂದ ಕೊಡಲ್ಪಟ್ಟು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಪ್ರಕಾರ ವಸೂಲ್ ಮಾ
ಡಲ್ಪಡತಕ್ಕದ್ದು.

65. ಅಂತಾ ನೋಟಿಸನ್ನೂ ನಕಷೇಯನ್ನೂ ಕಳುಹಿಸದೇಯಾಗಲಿ, ಸದರೀ ತಿಂಗಳೊಳಗಾಗಿ, ಪ್ರೆಸೀಡೆಂಟರಿಂದ ನಿರ್ಣ
ಯಿಸಲ್ಪಟ್ಟ ಪ್ರಕಾರವಲ್ಲದೆ ಜೇರೆ ಮಟ್ಟಗಳ ಪ್ರಕಾರವಾಗಲಿ, ಈ ಬೈಲಾ ನಿಬಂಧನೆಗಳಿಗೆ ಮತ್ಯಾವ ವಿಧದಿಂದಲಾದರೂ ವಿರುದ್ಧ
ವಾಗಿಯಾಗಲಿ, ಅಂತಾ ಕಟ್ಟಣವು ಆರಂಭಿಸಲ್ಪಟ್ಟರೆ, ಯಾ ಮಾಡಲ್ಪಟ್ಟರೆ, ಪ್ರೆಸೀಡೆಂಟರು ಜರೂರ್ ಇದ್ದಲ್ಲಿ ಸಂದರ್ಭಾನುಗುಣ
ವಾಗಿಯಿರುವಂತೆ ಅದನ್ನು ಬದಲಾಯಿಸಲ್ಪಡುವಂತೆ ಯಾ ನಾಶ ಪಡಿಸಲ್ಪಡುವಂತೆ ಮಾಡಬಹುದು. ಮತ್ತು ಆ ಬಗ್ಯೆ ಹಿಡಿದ
ಲಾಗವಡು, ಮೇಲೆ ಕಂಡ ನಿಬಂಧನೆಗಳ ಪ್ರಕಾರ ನಡಿಸಲಿಕ್ಕೆ ತಪ್ಪಿದ ಮನುಷ್ಯನಿಂದ ಕೊಡಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪ
ಡುವ ಮೇರೆ ವಸೂಲ್ ಮಾಡಲ್ಪಡತಕ್ಕದ್ದು.

66. ಮೇಲೆ ಕಂಡ ಮೇರೆ ಅಂತಾ ನಕಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳನ್ನು ಕುರಿತು ಮಂಜೂರಾತಿಯನ್ನಾಗಲಿ, ಜೇ
ಮಂಜೂರಾತಿಯನ್ನಾಗಲಿ, ಪ್ರೆಸೀಡೆಂಟರು ಬರವಣಿಗೇ ಮೂಲಕ ತಿಳಿಸದೇಯೂ, ಅಂತಾ ನೋಟಿಸ್ ತಲಪಿದ ಮೇಲೆ ಒಂದು
ತಿಂಗಳ ವಳಗಾಗಿ ಜೇರೆ ಮಟ್ಟವನ್ನು ಏರ್ಪಡಿಸದೆಯೂ ತಪ್ಪಿದ ಪಕ್ಷಕ್ಕೆ ಅಂತಾ ನೋಟಿಸಿ ಕೊಡುವ ಮನುಷ್ಯನು ಇದರ
ಲ್ಲಿ ಹಿಂದೆ ಯಾವ ಅಂಶ ಅಡಗಿದ್ದಾಗ್ಯೂ ಅಂತಾ ನಕಷೆಯಲ್ಲಿ ಕಾಣಿಸಲ್ಪಟ್ಟ ಮಟ್ಟಗಳ ಪ್ರಕಾರ ಅದರಲ್ಲಿ ಕಂಡ ಕಟ್ಟಣವನ್ನು
ಕಟ್ಟಿಸಲಿಕ್ಕಾಗಲಿ, ಖೋಲ್‌ಬಂದೀ ಮಾಡಿಸಲಿಕ್ಕಾಗಲಿ, ಪ್ರವರ್ತಿಸಬಹುದು; ಪರಂತು ಅಂತಾ ಕಟ್ಟೋಣವಾಗಲಿ ಖೋಲ್‌ಬಂದೀ
ಯಾಗಲಿ ಅನ್ಯಥಾ ಈ ಬೈಲಾಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.

67. ಮೆಂಬರಗಳ ಯಾವದಾದರೂ ಬಚ್ಚಲು ಯಾ ಚರಂಡಿಯಲ್ಲಿ ಆಗಲಿ, ಅವುಗಳೊಡನೆ ಸಂಬಂಧಿಸುವ ಯಾವ ಚರಂ
ಡಿಯಲ್ಲಾಗಲಿ, ಯಾವದಾದರೂ ಮಣ್ಣು, ಕಶ್ಮಲ, ಬೂದಿ, ತೋಟ, ಅಡಿಗೇಮನೆ, ಕುದುರೇಲಾಯ ಇಂತಾದ್ದರ ಬಾಬತು, ಕಚ
ರೆ, ಗಾಜಿನ ಚೂರು, ಜೋಕಿಗಳು, ಯಾ ಇತರ ಕಸ (ಅಥವಾ ತಕ್ಕ ಬಚಲು ತಯಾರ್ ಮಾಡಿಸಿ ಕೊಡುವ ಪರ್ಯಂತ) ಯಾವ
ದಾದರೂ ಮಲ ಇಂತಾದ್ದನ್ನು ಯಾವನು ಹಾಕುತ್ತಾನೋ ಯಾ ಇಡುತ್ತಾನೋ ಅಥವಾ ತನ್ನ ನೌಕರರು ಹಾಕುವಂತೆ ಯಾ
ಇಡುವಂತೆ ಒಪ್ಪುವ ಯಾವ ಮನುಷ್ಯನಾಗಲಿ ಪ್ರತಿ ತಪ್ಪಿತಕ್ಕೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆ
ಗೆ ಗುರಿಯಾಗತಕ್ಕದ್ದು.

68. ಯಾವ ಜಮೀನುಗಳಿಗೆ ಯಾ ಕಟ್ಟಣಗಳಿಗೆ ಫೂಟ್ ಚರಂಡೀಗಳು ಸಂಬಂಧಿಸಿದವುಗಳಾಗಿರುತ್ತವೋ ಅಂತಾ ಜಮೀನುಗ,
ಳಲ್ಲಿ ಯಾ ಕಟ್ಟಣಗಳಲ್ಲಿ, ಅಥವಾ ಜಮೀನುಗಳ ಹೊರಗೆ ಯಾ ಕಟ್ಟಣಗಳ ಹೊರಗೆ ಇರುವ ದರೋಬಸ್ತು ಫೂಟ್ ಚರಂಡೀಗಳೂ
ಯಾವದಾದರೂ, ಜೋಡಿಯಲ್ಲಾಗಲಿ, ಬೀದಿಯ ಬಳಿಯಲ್ಲಾಗಲಿ, ಇರುವ ಪಾಯಖಾನೆಗಳು ಬಚ್ಚಲುಗಳು ಬಚ್ಚಲು ಗುಣಿಗಳು
ಮೆಂಬರಗಳ ವಿಚಾರಣೆಯಲ್ಲಿಯೂ, ಅಧಿಕಾರದೊಳಗೂ, ಇರತಕ್ಕದ್ದಲ್ಲದೆ ಯಾವ ಜಮೀನುಗಳಿಗೂ ಕಟ್ಟಣಕ್ಕೂ ಅವು ಸೇರಿ ಇರು
ತ್ತವೋ, ಅಥವಾ ಯಾವದರ ಉಪಯೋಗಕ್ಕೋಸ್ಕರ ಅವು ಕಟ್ಟಲ್ಪಟ್ಟಿರುತವೋ ಅಥವಾ ಜಾರೀಯಾಗಿ ನಡಿಸಲ್ಪಡುತ್ತವೊ ಅಂತಾ
ಜಮೀನುಗಳ ಮತ್ತು ಕಟ್ಟಣದ ಮಾಲೀಕರ ಲಾಗವಡ್‌ನಿಂದಲೂ, ಖರ್ಚುಗಳಿಂದಲೂ, ಸದರೀ ಪಾಯಖಾನೇ ಮುಂತಾದವು ಬದ
ಲಾಯಿಸಲ್ಪಟ್ಟು, ದುರಸ್ತು ಮಾಡಲ್ಪಟ್ಟು, ಮತ್ತು ಕ್ರಮವಾದ ಸ್ಥಿತಿಯಲ್ಲಿಡಲ್ಪಡತಕ್ಕದ್ದು. ಮತ್ತು ಅಂತಾ ಯಾವ ಚರಂಡೀ
ಯಾಗಲಿ ಪಾಯಖಾನೇ ಯಾಗಲಿ ಬಚ್ಚಲು ಗುಂಡೀ ಯಾಗಲಿ ಯಾವದಕ್ಕೆ ಸಂಬಂಧಿಸಿ ಇರುತ್ತದೋ ಅಂತಾ ಯಾವಧಾದರೂ
ಜಮೀನು ಯಾ ಕಟ್ಟಣಗಳು ಇಂತಾವುಗಳ ಮಾಲೀಕನು ಆ ಬಗ್ಯೆ ಬರವಣಿಗೆಯಲ್ಲಿ ನೋಟಿಸ್ ಕೊಡೋಣಾದ ತರುವಾಯ ಎಂಟು
ದಿನಗಳೊಳಗೆ ಪ್ರೆಸೀಡೆಂಟರಿಂದ ನಿಯಮಿಸಲ್ಪಡುವ ರೀತಿಯಾಗಿ ಬದಲಾಯಿಸಲಿಕ್ಕೆ, ದುರಸ್ತು ಮಾಡಲಿಕ್ಕೆ, ಬಂದೋಬಸ್ತು ಪಡಿ
ಸಿ ಇಡಲಿಕ್ಕೆ ಸಹ ಉಪೇಕ್ಷಿಸಿದ ಪಕ್ಷಕ್ಕೆ ಪ್ರೆಸೀಡೆಂಟರು ಅಂತಾ ಚರಂಡೀಯನ್ನಾದರೂ ಪಾಯಖಾನೇಯನ್ನಾದರೂ ಬಚ್ಚಲು
ಗುಂಡಿಯನ್ನಾದರೂ ಬದಲಾಯಿಸುವಂತೆಯೂ, ದುರಸ್ತು ಪಡಿಸುವಂತೆಯೂ, ಬಂದೋಬಸ್ತು ಪಡಿಸುವಂತೆಯೂ, ಮಾಡ ಬ
ಹುದಲ್ಲದೆ ಆ ಬಗ್ಯೆ ಹಿಡಿದ ಲಾಗವಡು ಮಾಲೀಕನಿಂದ ಕೊಡಲ್ಪಟ್ಟು, ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್
ಮಾಡಲ್ಪಡತಕ್ಕದ್ದು.

69. ಈ ಬೈಲಾ ನಿಬಂಧನೆಗಳು ಜಾರೀಲಿ ಬಂದ ತರುವಾಯ ಪ್ರೆಸಿಡೆಂಟರು ಬರವಣಿಗೆ ಮೂಲಕವಾದ ಅನುಮತಿ ಇಲ್ಲ
ದೆ ಯಾಗಲಿ, ಅವರ ಹುಕುಮಿಗೆ ಬರಖಿಲಾಫ್ ಆಗಲಿ, ಅಂತಾ ಯಾವ ಚರಂಡೀ ಯಾ ಪಾಯಖಾನೆ ಯಾ ಬಚ್ಚಲು ಇಂತಾದ್ದು
ಕಟ್ಟಲ್ಪಟ್ಟರೆ, ಅಥವಾ ಕಿತ್ತು ಹಾಕಿಸುವಂತೆ, ಯಾ ನಿಲ್ಲಿಸುವಂತೆ ಯಾ ಮಾಡಿಸದೆ ಇರುವಂತೆ, ಪ್ರೆಸೀಡೆಂಟರಿಂದ ಹುಕ್ಕುಂ
ಮಾಡಲ್ಪಟ್ಟಿರುವ ಯಾವ ಚರಂಡಿ ಪಾಯಖಾನೆ, ಯಾ ಬಚ್ಚಲು ಗುಂಡಿ ಇಂತಾದ್ದನ್ನು ಯಾವನಾದರೂ ಕಟ್ಟಿದರೆ ಖೋಲ್
ಬಂದೀ ಮಾಡಿದರೆ ಯಾ ನಿಲ್ಲಿಸದೆ ನಡಿಸಿದರೆ ಹಾಗೆ ಮಾಡುವ ಪ್ರತಿ ಮನುಷ್ಯನೂ 2 ಆಣೆಮೊದಲು 5 ರೂಪಾಯಿಗಳವರಿಗೆ
ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು. ಮತ್ತು ಪ್ರೆಸೀಡೆಂಟರು ಅಂತಾ ಯಾವ ಚರಂಡೀಯಲ್ಲಾಗಲೀ ಪಾಯಖಾನೆಯಲ್ಲಾಗಲಿ

ಬಚ್ಚಲು ಗುಂಡಿಯಲ್ಲಾಗಲಿ, ತಮಗೆ ಯುಕ್ತ ತೋರುವಂತ್ಹಾ, ತಿದ್ದುಪಡಿಯನ್ನಾಗಲಿ, ಬದಲಾವಣೆಯನ್ನಾಗಲಿ, ಮಾಡಿಸಬಹುದು, ಮತ್ತು ಅದರ ಬಾಬತು ಲಾಗವಡನ್ನು ಅಂತಾ ಚರಂಡೀ ಯಾಗಲಿ ಪಾಯಖಾನೆಯಾಗಲಿ ಬಚ್ಚಲು ಗುಂಡಿಯಾಗಲಿ ಯಾವನಿಂದ ಅಕ್ರಮವಾಗಿ ಕಟ್ಟಿಸಲ್ಪಟ್ಟಿತೋ, ಯಾ ಖೋಲ್‌ಬಂದೀ ಮಾಡಲ್ಪಟ್ಟಿತೋ, ಯಾ ನಿಲ್ಲಿಸದೆ ನಡಿಸಲ್ಪಟ್ಟಿತೋ, ಅಂತಾ ಮನುಷ್ಯನು, ಕೊಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ವಸೂಲ್ ಆಗತಕ್ಕದ್ದು.

70. ಪ್ರೆಸೀಡೆಂಟರಾಗಲಿ, ಆ ಬಗ್ಯೆ ಅವರಿಂದ ಮೊಕರರ್ ಮಾಡಲ್ಪಟ್ಟ ಯಾವ ಆಫಿಸರಾಗಲಿ, ಅಂತಾ ಚರಂಡಿಯನ್ನಾದರೂ, ಪಾಯಖಾನೆಯನ್ನಾದರೂ, ಬಚ್ಚಲು ಗುಂಡಿಯನ್ನಾದರೂ, ತನಿಖೀ ಮಾಡಬಹುದು, ಮತ್ತು ಆಬಗ್ಯೆ, ಸೂರ್ಯೋದಯುದಮೊದಲು, ಸೂರ್ಯಾಸ್ತಮಯುದೊಳಗೆ ಯಾವಾಗಲಾಗಲಿ ಅಂತಾ ಚರಂಡಿ, ಪಾಯಖಾನೆ, ಯಾ ಬಚ್ಚಲು ಗುಂಡಿ ಇಂತಾದ್ದು ಯಾವದಕ್ಕೆ ಸೇರಿಯಿರುತ್ತೋ ಅಂತಾ ಮನೆ ಮುಂತಾದವುಗಳ ಅನುಭವದಾರನಿಗೆ ಬರವಣಿಗೇ ಮೂಲಕ ನೋಟಿಸ್ ಕೊಟ್ಟ ಹನ್ನೆರಡುಗಂಟೆಯುತರುವಾಯ ಯಾವದಾದರೂ ಜಮೀನಲ್ಲಿಯೂ, ಕಟ್ಟಡದಲ್ಲಿಯೂ, ಜರೂರಾದಂತಾ ಕುಮಕೀದಾರ್ರು, ಕಾಲೇಗಾರ್ರು, ಯಿವರುಗಳುನಿಶೀ ಪ್ರವೇಶಿಸಿ ಸಾಧ್ಯವಾದ ಮಟ್ಟಿಗೆ ಲೇಶವೂ ನುಕ್ಸಾನ್ ಉಂಟಾಗದಂತೆ ಯುಕ್ತವೆಂದು ತೋರುವ ಕಡೆ ಜಮೀನನ್ನು ಅಗಿಯಿಸಬಹುದು, ಮತ್ತು ಹಾಗೆ ತನಿಖೀ ತೆಗದುಕೊಂಡ ಮೇಲೆ ಸದರೀ ಚರಂಡಿ, ಪಾಯಖಾನೆ, ಯಾ ಬಚ್ಚಲುಗುಂಡಿ, ಬಂದೋಬಸ್ತಾಗಿಯೂ ಸರಿಯಾದ ಸ್ಥಿತಿಯಲ್ಲಿಯೂ ಇರುವದಿಲ್ಲವೆಂತಲಾಗಲಿ, ಈ ಬೈಲಾಗಳ ಜಾರೀಲಿಬಂದ ಮೇಲೆ ಇವುಗಳ ನಿಬಂಧನೆಗಳಿಗೆ ಬರಖಿಲಾಫಾಗಿ ಕಟ್ಟಲ್ಪಟ್ಟದೆಯೆಂತಲಾಗಲಿ ತಿಳಿಯಬಂದಲ್ಲಿ ಹಾಗೆ ತನಖೀ ತೆಗದುಕೊಳ್ಳೋಣದರ ಲಾಗವಡು, ಅಂತಾ ಚರಂಡಿ, ಯಾ ಪಾಯಖಾನೆ. ಯಾ ಬಚ್ಚಲುಗುಂಡಿ ಯಿವುಯಾವನಿಗೆ ಸೇರಿರುತವೋ ಅಂತಾ ಮನುಷ್ಯನಿಂದ ಕೊಡಲ್ಪಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಮೇರೆ ವಸೂಲ್‌ಮಾಡತಕ್ಕದ್ದು; ಆದರೆ ಚರಂಡಿಯಾಗಲಿ ಪಾಯಖಾನೆಯಾಗಲಿ ಬಚ್ಚಲುಗುಂಡಿಯಾಗಲಿ ಬಂದೋಬಸ್ತಾಗಿಯೂ, ಕ್ರಮವಾದ ಸ್ಥಿತಿಯಲ್ಲಿರುಂವತೆಯೂ ಈ ಬೈಲಾಗಳ ನಿಬಂಧನೆಗಳಿಗೆ ಬರಖಿಲಾಫಾಗಿ ಕಟ್ಟಲ್ಪಡದೇಯೂ ಕಾಣಬಂದರೆ ಪ್ರೆಸೀಡೆಂಟರಾಗಲಿ ಮೇಲೆ ಕಂಡ ಆಫಿಸರಾಗಲಿ ಭೂಮಿಯನ್ನು ಭರ್ತೀಮಾಡಿ ಸಾಧ್ಯವಾದಷ್ಟು ತ್ವರೆಯಲ್ಲಿ ನೆಟ್ಟಗೆ ಮಾಡಿಸತಕ್ಕದ್ದು. ಮತ್ತು ಅಂತಾ ಚರಂಡಿ, ಪಾಯಖಾನೆ, ಬಚ್ಚಲುಗುಂಡಿ, ಇವುಗಳನ್ನು ತೆಗೆಯುವದರಿಂದಲೂ, ಮುಚ್ಚುವದರಿಂದಲೂ, ನೆಟ್ಟಗೆ ಮಾಡಿಸುವದರಿಂದಲೂ, ಹಿಡಿಯುವ ಲಾಗವಡುಗಳು ಅಂತಾ ಸಂಗತಿಯಲ್ಲಿ ಮೆಂಬರ್‌ಗಳಿಂದ ಇಡಲ್ಪಡತಕ್ಕದ್ದು. ಪರಂತು ಮನೆಯೊಳಗೆ ಇರತಕ್ಕವರು ಆಚೆಗೆ ಹೋಗಲಿಕ್ಕೆ ಯುಕ್ತವಾದ ಅವಕಾಶ ಕೊಡುವ ಪರ್ಯಂತ ಹಾಗೆ ತನಿಖೀ ನೋಡಲಿಕ್ಕೋಸ್ಕರ ಹಿಂದುಗಳು ಮುಸಲ್ಮಾನರು ಇವರುಗಳ ಹೆಂಗಸರು ಇರತಕ್ಕಬಗ್ಗೆ ಕ್ಲುಪ್ತವಾದ ಜನಾನೇಗಳಲ್ಲಾಗಲಿ ಅಂತರ್ಗೃಹಗಳಲ್ಲಾಗಲಿ ಪ್ರವೇಶಿಸತಕ್ಕದ್ದಕ್ಕೆ ಇದರಲ್ಲಿ ಹಿಂದೆ ಅಡಗಿರುವ ಯಾವ ಅಂಶವೂ ಯಾವಾಗ್ಯೂ ಅಧಿಕಾರವನ್ನುಂಟು ಮಾಡತಕ್ಕದ್ದಲ್ಲವು.

71. ಈ ಬೈಲಾನಿಬಂಧನೆಗಳನುಸರಿಸಿ ಯಾವದಾದರೂ ಕಟ್ಟಡ, ಯಾ ಜಮೀನಿನ ಮಾಲೀಕನಿಂದಾಗಲಿ, ಅನುಭವದಾರನಿಂದಾಗಲಿ, ಯಾವ ಕಾಮಗಾರೀಯಾದರೂ ನೆರವೇರಿಸಲ್ಪಡಬೇಕಾಗಿ ಯಿದ್ದು ಅಂತಾ ಕೆಲಸವನ್ನು ಅವನು ನೆರವೇರಿಸಲಿಕ್ಕೆ ತಪ್ಪಿಹೋದ ಪಕ್ಷದಲ್ಲಿ, ಹಾಗೆ ತಪ್ಪಿಹೋದ್ದಕ್ಕೆ ಯಾವದಾದರೂ ಜುರ್ಮಾನೆವಿಧಿಸಲ್ಪಡಲಿ ವಿಧಿಸಲ್ಪಡದೇ ಯಿರಲಿ ಪರಂತು ಅಂತಾ ಕೆಲಸವನ್ನು, ಪ್ರೆಸೀಡೆಂಟರು ಮಾಡಿಸಬಹುದು. ಆ ಬಗ್ಗೆ ಹಿಡಿದ ಲಾಗವಡನ್ನು ಸದರೀ ಕಾಮಗಾರಿ ಯಾವ ಮನುಷ್ಯನಿಂದ ನೆರವೇರಿಸಲ್ಪಡತಕ್ಕದ್ದೋ ಆ ಮನುಷ್ಯನು ಕೊಡತಕ್ಕದ್ದಲ್ಲದೆ ಇದರಲ್ಲಿ ಮುಂದೆ ವಿಧಿಸಲ್ಪಡುವ ರೀತಿಯಾಗಿ ಆ ಮೊಬಲಗ್ ವಸೂಲ್ಮಾಡಲ್ಪಡತಕ್ಕದ್ದು.

72. (ಕಾಮಗಾರೀ ಮಾಡಿಸುವದಕ್ಕೆ) ತಪ್ಪಿದ ಮನುಷ್ಯನು, ಕಟ್ಟಡ ಯಾ ಜಮೀನಿನ ಮಾಲೀಕನಾಗಿ ಯಿದ್ದರೆ, ಪ್ರೆಸೀಡೆಂಟರು ಈ ಬಗ್ಗೆ ಜಾಸ್ತೀಯಾಗಿ ಪರಿಹಾರವನ್ನು ಉಂಟುಮಾಡುವ ಉದ್ದಿಶ್ಯ ಅಂತಾ ಯಾವ ಮಾಲೀಕನ ಮೇಲಾಗಲಿ ಯಾವದಾದರೂ ವ್ಯಾಜ್ಯ ಯಾ ನಡವಳಿತ ನಡಿಸಿಯಿರಲಿ ನಡಿಸದೇಯಿರಲಿ, ತತ್ಕಾಲದಲ್ಲಿ ಮಾಲೀಕನಿಂದ ಕೊಡಲ್ಪಡತಕ್ಕ ಲಾಗವಡು ಮೊಬಲಗ್ ವಿಶಿಷ್ಟವನ್ನಾಗಲಿ ಆ ಪೈಕೀ ಯಷ್ಟರಭಾಗವನ್ನಾಗಲಿ ಆಗ್ಯೆ ಅಥವಾ ಆ ತರುವಾಯ ಯಾವ ಕಾಲದಲ್ಲಾಗಲಿ ಅಂತಾ ಮಾಲೀಕನ ವಶದಲ್ಲಿರತಕ್ಕ ಕಟ್ಟಡವನ್ನು ಯಾ ಜಮೀನನ್ನು ಅನುಭವದಲ್ಲಿಯುಳ್ಳ ಮನುಷ್ಯನು ಸಲ್ಲಿಸುವಂತೆ ಕೋರಬಹುದು. ಮತ್ತು ಹಾಗೆ ಅನುಭವದಲ್ಲಿಯುಳ್ಳ ಮನುಷ್ಯನನ್ನು ಕೇಳಿದಮೇಲೆ ಆತನು ಅದನ್ನು ಸಲ್ಲಿಸದೇ ಹೋದ ಪಕ್ಷಕ್ಕೆ ಅಂತಾ ಅನುಭವದಾರನ ಬಾಬತು ಚರಸ್ವತ್ತುಗಳ ಜಫ್ತೀಯಿಂದ ಅದು ವಸೂಲ್ಮಾಡಲ್ಪಡಬಹುದು; ಮತ್ತು ಹಾಗೆ ಅನುಭವದಾರನಾದ ಪ್ರತಿ ಮನುಷ್ಯನೂ, ಅಂತಾ ಯಾವ ಖರ್ಚಿನ ವಿಷಯದಲ್ಲಾಗಲಿ ತಾನು ಸದರೀ ಮೇರೆ ಸಲ್ಲಿಸಿದಷ್ಟು ಮಟ್ಟಿಗೆ ಅಥವಾ ತನ್ನಿಂದ ವಸೂಲ್‌ಮಾಡಲ್ಪಟ್ಟಷ್ಟು ಮಟ್ಟಿಗೆ ತಾನು ಸಲ್ಲಿಸತಕ್ಕ ಬಾಡಿಗೇ ಮೊಬಲಗ್‌ನಲ್ಲಿ ವಜಾ ಮಾಡಿಕೊಳ್ಳಲಿಕ್ಕೆ ಹಕ್ಕು ಉಂಟಾಗಿರತಕದ್ದು.

73. ಯಾವದಾದರೂ ಕಟ್ಟಡ ಯಾ ಜಮೀನಿನ ಯಾವ ಅನುಭವದಾರನೂ, ಅದರ ಮಾಲೀಕನಿಗೆ ಈ ಬೈಲಾಗಳಿಂದ ಕಟ್ಟೋಣಾದ ಯಾವ ಲಾಗವಡುಗಳಿಗೋಸ್ಕರವಾಗಲಿ, ಯಾವ ಕಟ್ಟಡ ವಗೈರೇಗಾಗಿ ಅಂತಾ ಲಾಗವಡು ಕೊಡಬೇಕಾಗಿರುತ್ತೋ ಆ ಕಟ್ಟಡಗಳಿಗೋಸ್ಕರ ತಂನನ್ನು ಕೇಳಿದಾಗ ತನ್ನಿಂದ ಸಲ್ಲಬೇಕಾದ ಅಥವಾ ಹಾಗೆ ಕೇಳಲ್ಪಟ್ಟ ತರುವಾಯ ಯಾವ ಕಾಲದಲ್ಲಾಗಲಿ

ಬಾಕೀಯಾದ ತನ್ನಿಂದ ಕೊಡಬೇಕಾಗುವ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಮೊಬಲಗನ್ನು ಕೊಡುವದಕ್ಕೆ ಗುರಿಯಾಗತಕ್ಕದ್ದಿಲ್ಲವು. ಪರಂತು ಪ್ರೆಸೀಡೆಂಟರು ಆವಿಷಯವನ್ನು ಕುರಿತು ತನ್ನನ್ನು ಕೇಳಿದ ಮೇಲೆ ತಾನು ಸಲ್ಲಿಸತಕ್ಕ ಬಾಡಿಗೇ ಬಾಬತು ಮೊಬಲಗ್ ಮತ್ತು ಯಾವನಿಗೆ ಅಂತಾ ಬಾಡಿಗೇ ಕೊಡಬೇಕಾಗಿರುತ್ತೋ ಆ ಮನುಷ್ಯನ ಹೆಸರು, ಅಷ್ಟ ಹೆಸರು, ಇವುಗಳನ್ನು ವಾಸ್ತವ್ಯವಾಗಿ ಪ್ರಕಟಿಸುವದಕ್ಕೆ ಉಪೇಕ್ಷಿಸಿದರೆ ಯಾ ನಿರಾಕರಿಸಿದರೆ ಆ ಮೇರೆ ಗುರಿಯಾಗವೇ ಹೋಗುವದಿಲ್ಲವು. ಆದರೆ ಅಂತಾ ಅನುಭವದಾರನನ್ನು ಕೇಳಿದ ಮೊಬಲಗ್ ಹಾಗೆ ಕೇಳಿದ ಕಾಲದಲ್ಲಾಗಲಿ ತರುವಾಯವಾಗಲಿ ತಾನು ಬಾಕೀಯಾಗಿದ್ದ ಬಾಡಿಗೇ ಮೊಬಲಗಿಗಿಂತ ಜಾಸ್ತೀ ಯೆಂಬದಾಗಿ ರುಜುಮಾಡುವ ಭಾರ ಸದರೀ ಅನುಭವದರನನ್ನೇ ಸೇರಿಯಿರುತ್ತದೆ. ಮತ್ತು ಇದರಲ್ಲಿ ಅಡಗಿರುವ ಯಾವ ಅಂಶವೂ ಮೇಲೆ ಕಂಡಂತೆ ಯಾವದಾದರೂ ಕಾಮಗಾರೀಗಳ ಬಾಬತು ಲಾಗವಡುಗಳನ್ನು ಕುರಿತು ಅಂತಾ ಯಾವ ಮಾಲೀಕ ಯಾ ಅನುಭವದಾರ ಇಂತಾವರಿಗೆ ಪರಸ್ಪರ ನಡೆದಿರುವ ಮುಖ್ಯವಾದ ಯಾವ ಒಡಂಬಡಿಕೆಗೂ ಭಾಧಕವಾಗುತ್ತದೆಯೆಂದು ಗ್ರಹಿಸ ಕೂಡದು.

74. ಯಾವದಾದರೂ ಕಟ್ಟಡ ಯಾ ಜಮೀನಿನ ಮಾಲೀಕನು, ಪ್ರೆಸೀಡೆಂಟರು ತಾಕೀದ್ ಮಾಡುವ ಯಾವದಾದರೂ ಕಾಮಗಾರಿಯನ್ನು ಮಾಡಿಸದೇ ತಪ್ಪಿದ ಪಕ್ಷಕ್ಕೆ ಅಂತಾ ಯಾವದಾದರೂ ಕಟ್ಟಡ ಯಾ ಜಮೀನಿನ ಅನುಭವದಾರನು ಅಂತಾ ಕೆಲಸವನ್ನು ಮಾಡಿಸತಕ್ಕದ್ದು. ಮತ್ತು ಅದರ ಲಾಗವಡುಗಳು ಮಾಲೀಕನಿಂದ ಅವನಿಗೆ ಪಾವತೀ ಮಾಡಲ್ಪಡತಕ್ಕದ್ದು ಅಥವಾ ಅವನ ದೆಸೆಯಿಂದ ಅಂತಾ ಮಾಲೀಕನಿಗೆ ಬಾಕೀ ಆಗತಕ್ಕ ಬಾಡಿಗೆಯಲ್ಲಿ ವಜಾ ಮಾಡಲ್ಪಡತಕ್ಕದ್ದು.

75. ಯಾವದಾದರೂ ಕಟ್ಟಡ ಯಾ ಜಮೀನಿನ ಅನುಭವದಾರನು ಅಂತಾ ಕಟ್ಟಡ ಯಾ ಜಮೀನ್ ವಿಷಯದಲ್ಲಿ ಈ ಬೈಲಾ ನಿಬಂಧನೆಗಳ ಯಾವ ಅಮಲನ್ನಾಗಲಿ ನಡಿಸತಕ್ಕದ್ದರಲ್ಲಿ ಆದರ ಮಾಲೀಕನು ಸದರೀ ಮೇರೆ ಅಮಲ್ ನಡಿಸಬೇಕೆಂಬ ತನ್ನ ಅಭಿಪ್ರಾಯವನ್ನು ಕುರಿತು ಅನುಭವದಾರನಿಗೆ ನೋಟಿಸ್ ಕೊಟ್ಟ ತರುವಾಯ ಸದರೀ ಅನುಭವದಾರನು ಸದರೀ ಮಾಲೀಕನನ್ನು ನಿರೋಧಿಸಿದ ಪಕ್ಷಕ್ಕೆ ಪ್ರೆಸೀಡೆಂಟರು, ಆ ವಿಷಯ ರುಜುವಾದ ಮೇಲೆ ಅಂತಾ ಕಟ್ಟಡ ಯಾ ಜಮೀನ್ ವಿಷಯದಲ್ಲಿ ಈ ಬೈಲಾನಿಬಂಧನೆಗಳ ಅಮಲ್ ನಡಿಸಲಿಕ್ಕೆ ಜರೂರಾದ ಅಂತಾ ದರೋಬಸ್ತು ಕಾಮಗಾರಿಗಳನ್ನೂ ನೆರವೇರಿಸುವ ಬಗ್ಗೆ ಅನುಭವದಾರನು ಮಾಲೀಕನಿಗೆ ಅವಕಾಶ ಕೊಡತಕ್ಕದ್ದೆಂದು ಬರವಣಿಗೆಯಲ್ಲಿ ಒಂದು ಹುಕ್ಕುಂ ಕೊಡಬಹುದು. ಮತ್ತು ಹುಕ್ಕುಂ ತಾರೀಖು ಲಾಗಾಯತ್ ಎಂಟು ದಿನಗಳು ಕಳೆದ ತರುವಾಯ ಅಂತಾ ಕಾಮಗಾರೀಗಳನ್ನು ನೆರವೇರಿಸುವ ಅಂಶದಲ್ಲಿ ಅಂತಾ ಮಾಲೀಕನಿಗೆ ಅವಕಾಶ ಕೊಡಲಿಕ್ಕೆ ಅಂತಾ ಅನುಭವದಾರನು ನಿರಾಕರಿಸುತಿದ್ದರೆ ಹಾಗೆ ನಿರಾಕರಿಸುತಿರುವ ಪ್ರತಿ ದಿನಕ್ಕೂ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿ ಯಾಗತಕ್ಕದ್ದು; ಮತ್ತು ಅಂತಾ ಪ್ರತಿ ಮಾಲೀಕನೂ ಹಾಗೆ ನಿರಾಕರಿಸಲ್ಪಡುತಿರುವಲ್ಲಿ ಅಂತಾ ಕಾಮಗಾರಿಗಳನ್ನು ಮಾಡಿಸದೇ ತಪ್ಪಿದ ಸಬಬ್ ಅನ್ಯಥಾ ಗುರಿಯಾಗಬಹುದಾಗಿದ್ದ ಯಾವ ಜುರ್ಮಾನೆಯಿಂದಲೂ, ಮಾಫ್ ಆಗತಕ್ಕದ್ದು.

76, ಈ ಬೈಲಾ ನಿಬಂಧನೆಗಳು ಜಾರೀಯಲ್ಲಿ ಬರುವ ಕಾಲದಲ್ಲಾಗಲಿ ಆತರುವಾಯವಾಗಲಿ, ಮಾಡಲ್ಪಟ್ಟ, ಇಡಲ್ಪಟ್ಟ ಯಾ ಕಟ್ಟಲ್ಪಟ್ಟ ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರು ತೊಟ್ಟಿಗಳು, ಬಾವಿಗಳು, ಕಾಲುವೆಗಳು, ಜಲದಾರೆಗಳು, ತೂಬಿನ ಕಾಲ್ವೆಗಳು ನೀರು ನಲ್ಲಿಗಳು, ನೀರು ತೋಡುವ ಯಂತ್ರಗಳು, ಅಥವಾ ನೀರಿನ ಸಂಬಂಧವಾದ ಇತರ ಕಾಮಗಾರೀಗಳು, ಇಂತಾವು ಮೆಂಬರ್‌ಗಳ ಲಾಗವಾಡಿನಿಂದ ಕಲ್ಪಿಸಲ್ಪಡಲಿ, ಯಾ ಇಡಲ್ಪಡಲಿ, ಯಾ ಕಟ್ಟಲ್ಪಡಲಿ, ಅನ್ಯಥಾ ಆಗಲಿ, ಪರಂತು ಅಂತಾದ್ದೂ; ಮತ್ತು ಸದರೀ ಕೆರೇ ವಗೈರೇಗೆ ಸೇರಿದ ಯಾ ಅವುಗಳೊಡನೆ ಸಂಬಂಧಿಸಿದ ದರೋಬಸ್ತು ಸೇತುವೆಗಳು ಕಟ್ಟಡಗಳು, ಯಂತ್ರಗಳು, ಕೆಲಸಗಳು, ಸಾಮಾನುಗಳು, ಪದಾರ್ಥಗಳು, ಇವುಗಳೂ, ಮತ್ತು ಯಾವದಾದರೂ ಪಬ್ಲಿಕ್ ಕೆರೆಗೆ ಸಮೀಪವಾದ (ಸ್ವಂತ ಸ್ವತ್ತು ಅಲ್ಲದೆಯಾಗಲಿ ಸರ್ಕಾರದ ಸ್ವತ್ತಲ್ಲದೆಯಾಗಲಿ ಇರುವ) ಅದಕ್ಕೆ ಸೇರಿದಹಾಗೆ ಇರುವ ಯಾವದಾದರೂ ಜಮೀನ್ ಇಂತಾದ್ದೂ ಮೆಂಬರ್‌ಗಳ ಅಧಿಕಾರದಲ್ಲಿರತಕ್ಕದ್ದಲ್ಲವೆ ಅವರಿಗೆ ಸೇರಿದವುಗಳಾಗಿರತಕ್ಕವು.

77. ಮೆಂಬರ್‌ಗಳು ನಿವಾಸಿಗಳಿಗೆ ನೀರು ಒದಗಿಸುವದಕ್ಕೋಸ್ಕರವಾಗಲಿ, ಈ ಬೈಲಾ ನಿಬಂಧನೆಗಳಲ್ಲಿ ಕಂಡ ಇತರ ಕಾರ್ಯಗಳಿಗೋಸ್ಕರವಾಗಲಿ ಉಪಯೋಗಿಸುವ ಹಾಲೀ ಇರತಕ್ಕ ದರೋಬಸ್ತು ಪಬ್ಲಿಕ್ ಕೆರೆಗಳು, ಕುಂಟೆಗಳು, ನೀರುತೊಟ್ಟಿಗಳು, ಬಾವಿಗಳು, ಕಾಲುವೆಗಳು, ಮೋಹರೀಗಳು, ತೂಬಿನಕಾಲುವೆಗಳು, ನೀರು ನಲ್ಲೀಗಳು, ನೀರು ತೋಡುವ ಯಂತ್ರಗಳು, ಮತ್ತು ಇತರ ನೀರಿನ ಕಾಮಗಾರೀಗಳು ಇಂತಾವು ಜಾರೀಯಾಗಿ ನಡೆಯುವಂತೆಯೂ, ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು. ಅಥವಾ ಅವರು, ಅವುಗಳಿಗೆ ಬದಲಾಗಿ, ಅಂತಾ ಇತರ ಕಾಮಗಾರೀಗಳನ್ನು ಮಾಡಿಸಿ ಅವು ಕಾಪಾಡಲ್ಪಡುವಂತೆಯೂ, ನೀರು ಒದಗಿಸಲ್ಪಡುವಂತೆಯೂ, ಮಾಡತಕ್ಕದ್ದು. ಮತ್ತು ಮೆಂಬರ್‌ಗಳು ಕೊಡಗು ಶೀಮೆಯ ಚೀಫ್ ಕಮಿಷನರವರ ಮಂಜೂರಾತಿಯ ಮೇಲೆ ಆಗಿಂದಾಗ್ಗೆ ಮ್ಯುನಿಸಿಪಲ್ ಸರಹದ್ದುಗಳೊಳಗೆ ನೀರು ತಲಲಿಕ್ಕೋಸ್ಕರ ಕಾಲ್ವೆಗಳನ್ನು ನಿರ್ಮಿಸಿ ನಲ್ಲೀಗಳನ್ನು ಇಡಿಸುವದು ಮಾತ್ರವಲ್ಲದೆ ಮೇಲೆ ಕಂಡ ಕೆಲಸಕ್ಕಾಗಿ ಹೊಸ ಕೆರೆಗಳು ನೀರು ಕುಂಟೆಗಳು ತೊಟ್ಟಿಗಳು ಬಾವಿಗಳು, ನೀರಿಗೆ ಸಂಬಂಧಪಟ್ಟ ಇತರ ಕಾಮಗಾರೀಗಳು ಇವುಗಳನ್ನ ಕಟ್ಟನ್ನಾಗಲಿ ಒದಗಿಸಬಹುದು.

E

78. ಸೆಕ್ಷನ್ 79 ಅನುಸರಿಸಿ ಮೆಂಬರಗಳಿಂದ ನಿಯಮಿಸಲ್ಪಡುವ ಪ್ರಕಾರ ಹೊರತು ಅನ್ಯಥಾ ಮೆಂಬರಗಳ ಬಾಬತು ಯಾವದಾದರೂ ನೀರಿನ ಬಗ್ಗೆ ಉದ್ದೇಶಿಸಲ್ಪಟ್ಟ ಯಾ ಕ್ಲುಪ್ತವಾದ ಸಣ್ಣ ಹೊಳೆ, ಕೆರೆ, ಕುಂಟೆ, ಬಾವಿ, ನೀರುತೊಟ್ಟಿ, ಜಲದಾರಿ, ಅಥವಾ ಕಾಲುವೆ, ಇಂತಾದ್ದರಲ್ಲಿ ಸ್ನಾನ ಮಾಡುವ ಅಥವಾ ಅದರಲ್ಲಿ ಯಾವದಾದರೂ ಕುದುರೆ, ನಾಯಿ, ಅಥವಾ ಇತರ ಜಂತುವು, ಅಥವಾ ತುಪ್ಪಟ, ಬಟ್ಟೆ, ಅಥವಾ ವುಡುವ ಬಟ್ಟೆ ಅಥವಾ ಅಡಿಗೇ ಮುಂತಾದ ಕಾರ್ಯಗಳಿಗೋಸ್ಕರ ಉಪಯೋಗಿಸುವ ಯಾವದಾದರೂ ಪಾತ್ರೆ ಸಾಮಾನುಗಳು, ಜಂತುವಿನ ಚರ್ಮ ತೊಗಲು ಅಥವಾ ಅಸಹ್ಯವಾದ ಯಾ ಉಪದ್ರವಕರವಾದ ಇತರವಸ್ತು ಇಂತಾದ್ದು ಯಾವದನ್ನಾಗಲಿ ತೊಳೆಯುವ, ಯಾ ತೊಳೆಯಿಸುವ; ಅಥವಾ ಅದರಲ್ಲಿ ಯಾವದಾದರೂ ಜಂತುವು ಗ್ರೇವಲ್ ಕಲ್ಲು ಧೂಳು, ಅಥವಾ ಯಾವದಾದರೂ, ಕಚರ, ಕಶ್ಮಲ, ಕಲ್ಮಷ, ಅಥವಾ ದುರ್ಗಂಧವುಳ್ಳ ಯಾ ಬಾಧಕವಾದ ಇತರ ಪದಾರ್ಥ ಯಾ ವಸ್ತು ಇಂತಾದ್ದನ್ನು ಹಾಕುವ, ಇರಿಸುವ, ಬಿಸಾಡುವ, ಅಥವಾ ಪ್ರವೇಶಿಸುವಂತೆ ಮಾಡುವ, ಅಥವಾ ಅದರಲ್ಲಿ ಯಾವದಾದರೂ ಕೊಳೆ ನೀರು ಬಂದು ಬೀಳುವ ತೊಟ್ಟಿ, ಬಚ್ಚಲು ಚರಂಡಿ, ಯಂತ್ರ ಅಥವಾ ಕಡಾಯಿ, ಇಂತಾದ್ದರ ಬಾಬತು ನೀರು, ಅಥವಾ ತನ್ನದಾಗಿ ಇರುವ ಯಾ ತನ್ನ ಅನುಭವದಲ್ಲಿ ಇರುವ ಯಾವದಾದರೂ ಕಟ್ಟಡದಿಂದಾಗಲಿ, ಭೂಮಿಯಿಂದಾಗಲಿ ಹರಿಯುವ ಅನಾರೋಗ್ಯಕರವಾದ ಯಾ ಅಸಹ್ಯವಾದ ಯಾವದಾದರೂ ದ್ರವಪದಾರ್ಥ ಯಾ ವಸ್ತು ಇಂತಾದ್ದನ್ನು ಹರಿಯುವಂತೆ ಅಥವಾ ಅಲ್ಲಿಗೆ ತರಲ್ಪಡುವಂತೆ ಮಾಡಿಸುವ ಯಾ ಅಪ್ಪಣೆ ಕೊಡುವ ಯಾ ಅಂತಾ ಯಾವ ನೀರಾಗಲಿ ಯೆಷ್ಟುಮಾತ್ರವಾದರೂ ಕೊಳೆಯಾಗುವಂತೆ ಯಾ ಕೆಡುವಂತೆ ಯಾವ ಕೆಲಸವಾಗಲಿ ಮಾಡುವ ಯಾವ ಮನುಷ್ಯನಾದರೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

79. ಮೆಂಬರಗಳು ಯಾವ ಪಬ್ಲಿಕ್ ಪ್ರದೇಶವನ್ನಾಗಲಿ ಜನಗಳ ಖಾಸಗತ್ ಸ್ವತ್ತಲ್ಲದ ದೊಡ್ಡ ಕೆರೆಗಳ ಅಥವಾ ಯಾವದಾದರೂ "ರ್ಡ" ಎಂಬ ನದೀ ತೀರದ ಯಾವ ಭಾಗವನ್ನಾಗಲಿ, ಸ್ನಾನ ಘಟ್ಟವಾಗಿ ಉಪಯೋಗಿಸುವ ಬಗ್ಗೆ ಏರ್ಪಾಡು ಮಾಡಬಹುದು. ಮತ್ತು ಪ್ರಜೆಗಳಿಗೆ ಸ್ನಾನಾರ್ಥವಾಗಿ ಅನುಕೂಲಗಳಾದ ಬೇಕಾದಷ್ಟು ಕೊಳಗಳನ್ನು ಸಹ ಒದಗಿಸಬಹುದು. ಅಥವಾ ಪ್ರತ್ಯೇಕವಾಗಿ ಏರ್ಪಡಿಸಬಹುದು. ಮತ್ತು ಜಂತುಗಳನ್ನು ತೊಳೆಯುವ ಬಗ್ಯಾಗಲಿ ಬಟ್ಟೆಗಳೊಗೆಯುವ ಬಗ್ಯಾಗಲಿ ಪ್ರಜೆಗಳ ಆರೋಗ್ಯ, ಪಾಕೀಜ್, ಸೌಖ್ಯ, ಇವುಗಳಿಗೆ ಸಂಬಂಧಿಸಿದ ಯಾವದಾದರೂ ಇತರ ವಿಷಯಗಳಿಗೋಸ್ಕರವಾಗಲಿ ಕೊಳಗಳನ್ನು ಯಾ ಕುಂಟೆಗಳನ್ನು, ಯಾ ರ್ಡ ಎಂಬ ಪ್ರವಾಹಗಳನ್ನು ಪ್ರತ್ಯೇಕವಾಗಿ ಯೇರ್ಪಡಿಸಲೂ ಬಹುದು.

80. ಆರೋಗ್ಯ ಭಂಗಕಾರಿಯಾಗಿ ಯಾ ನೆರೆಹೊರೆಗೆ ಬಾಧಕವಾಗಿ ತೋರುವ ಯಾವದಾದರೂ ಖಾಸಗತ್ನ ಕೆರೆಯನ್ನು ಶೋಧಿಸುವಂತೆಯೂ ಅಂತಾ ಯಾವದಾದರೂ ನಿವೇಶನ ಮುಂತಾದದರೊಳಗಿರುವ ಅನುಪಯುಕ್ತವಾಗಿಯೂ, ನೆಲೆಯಾಗಿ ನಿಂತಿರುವದರಿಂದ ಕೆಟ್ಟುಹೋಗಿಯೂ ಇರುವ ನೀರನ್ನು ಎತ್ತಿಸಿಬಿಡುವಂತೆಯೂ ತೆಗೆಸಿ ಹಾಕುವಂತೆಯೂ, ಲಿಖಿತ ಮೂಲಕವಾದ ನೋಟಿಸದ್ವಾರಾ, ಯಾವ ನಿವೇಶನ ಮುಂತಾದವುಗಳ ಮಾಲೀಕನಿಗಾಗಲಿ ತಾಕೀದ್ ಮಾಡುವದು ಪ್ರೆಸಿಡೆಂಟರಿಗೆ ನ್ಯಾಯ್ಯವಾಗಿರತಕ್ಕದ್ದು. ಮತ್ತು ಅಂತಾ ಮಾಲೀಕನು ಅಂತಾ ನೋಟಿಸ್ ಜಾರಿಯಾದ ಲಾಗಾಯತು ಎಂಟು ದಿನಗಳಲ್ಲಿ ಅಂತಾ ತಾಕೀದ್ ಪ್ರಕಾರ ನಡಿಸಲಿಕ್ಕೆ ತಿರಸ್ಕರಿಸಿದರೆ, ಯಾ ಉಪೇಕ್ಷಿಸಿದರೆ ಪ್ರೆಸಿಡೆಂಟರೂ, ಅವರ ಆಫಿಸರಗಳೂ, ಕೆಲಸದವರೂ ಪ್ರವೇಶಿಸಿ ತಮಗೆ ಯುಕ್ತತೋರುವ ಪ್ರಕಾರ ಮೇಲೆ ಕಂಡ ವಿಶಿಷ್ಟಾಂಶಗಳಿಗೋಸ್ಕರವಾಗಲಿ ಅಪೈಕೀ ಕೆಲವಕ್ಕೋಸ್ಕರವಾಗಲಿ ಜರೂರಾದ ದರೋಬಸ್ತು ಕಾರ್ಯಗಳನ್ನೂ ಮಾಡಬಹುದು. ಅದರಿಂದ ಹಿಡಿದ ಲಾಗವಡನ್ನು ಹಾಗೆ ತಪ್ಪಿದ ಅಂತಾ ನಿವೇಶನ ಮುಂತಾದವುಗಳ ಮಾಲೀಕನು ಕೊಡತಕ್ಕದ್ದಲ್ಲದೆ ಮ್ಯುನಿಸಿಪಾಲಿಟಿಗೆ ಸಲ್ಲತಕ್ಕ ಸಾಲದೋಪಾದಿಯಲ್ಲಿ ವಸೂಲ್ ಮಾಡಲ್ಪಡತಕ್ಕದ್ದು.

81. ಕೆಟ್ಟ ನೀರು ನಿಂತಿರುವ ಸ್ಥಳವಗೈರೇಗಳು ಯಾವ ಮನುಷ್ಯನ ಸ್ವಂತ ಆಸ್ತಿಯಾಗಿದ್ದರೂ ಅನ್ಯಥಾ ಇದ್ದರೂ ವಾನಸ್ಥರ ಆರೋಗ್ಯಕ್ಕೆ ಹಾನಿಕರವೆಂತ ತೋರುವ ಯಾವದಾದರೂ ಸ್ವಂತ ಆವರಣದಲ್ಲಿಲ್ಲದ, ಮತ್ತು ಆಚೆಗೆ ಹೋಗದೆ ನೆಲೆಯಾಗಿ ನಿಂತಿರುವದರಿಂದ ಕೆಟ್ಟುಹೋದ ನೀರುಳ್ಳ ಅಂತಾ ದರೋಬಸ್ತು ಸ್ಥಳಗಳನ್ನೂ ಪ್ರೆಸಿಡೆಂಟರು ಆಗಿಂದಾಗ್ಯೆ ತಮಗೆ ಯುಕ್ತವೆಂದು ತೋರುವ ಪ್ರಕಾರ ಶೋಧಿಸತಕ್ಕದ್ದು, ಭರ್ತೀ ಮಾಡತಕ್ಕದ್ದು. ಅಥವಾ ನೀರು ತೆಗೆಯಿಸಿ ಹಾಕತಕ್ಕದ್ದು.

82. ಈ ಬೈಲಾ ನಿಬಂಧನೆಗಳಿಂದ ಮಾಡಲ್ಪಡತಕ್ಕದ್ದೆಂದು ನಿಯಮಿಸಲ್ಪಟ್ಟ ಯಾ ಅಧಿಕಾರ ಕೊಡಲ್ಪಟ್ಟ ಯಾವ ಕಾಮಗಾರಿಗಳನ್ನಾಗಲಿ, ಮಾಡಿಸುವಲ್ಲಿ ಹಾಗೆ ಮಾಡಿಸುವದರಿಂದ ಅಟಕಾವು ಮಾಡಲ್ಪಡುವ, ಹಾನಿ ಹೊಂದುವ, ಯಾ ಅನುಪಯುಕ್ತವಾಗುವ ರಸ್ತೆಗಳು ವಗೈರೇಗೆ ಬದಲಾಗಿ ಮ್ಯುನಿಸಿಪಲ್ ಫಂಡಿನಿಂದ ಲಾಗವಡು ಮುಟ್ಟಿಸಿ ಬೇಕಾದಷ್ಟು ಅನುಕೂಲಗಳಾದ ರಸ್ತೆಗಳು, ನೀರು ಕಾಲುವೆಗಳು, ಚರಂಡೀಗಳು, ನಾಲೇಗಳು, ಇವುಗಳನ್ನು ಮೆಂಬರಗಳು ಒದಗಿಸತಕ್ಕದ್ದು, ಮತ್ತು ಮಾಡತಕ್ಕದ್ದು. ಮತ್ತು ಮೆಂಬರಗಳಿಗೂ, ಅದರಿಂದ ಹಾನಿಪಟ್ಟ ಮನುಷ್ಯರಿಗೂ ತಕರಾರ್ ಸಂಭವಿಸಿದ ಪಕ್ಷಕ್ಕೆ ಅಂತಾ ತಕರಾರ್, ನುಕ್ಸಾನ್, ವ ಲಾಗವಾಡ್ ಇವುಗಳ ವ್ಯವಸ್ಥೆಯ ಬಗ್ಗೆ ಇದರಲ್ಲಿ ಮುಂದೆ ವಿಧಿಸಲ್ಪಡುವ ಪ್ರಕಾರ ವ್ಯವಸ್ಥೆಯಾಗತಕ್ಕದ್ದು.

83. ಯಾವದಾದರೂ ಬೀದಿ ಅಥವಾ ರಸ್ತೆಯ ತಳವರಸೆ ಅಥವಾ ಮೇಲ್ಭಾಗ, ಯಾವದಾದರೂ ಬಚ್ಚಲು ಯಾ ಚರಂಡಿ, ಇಂತಾದ್ದು ಮೆಂಬರುಗಳಿಂದ ತೆಗಿಯಿಸಲ್ಪಟ್ಟರೆ ಯಾ ಒಡೆಯಿಸಲ್ಪಟ್ಟರೆ, ಯಾವ ಬಗ್ಗೆ ಅವು ಅಗೆಯಿಸಲ್ಪಟ್ಟವೋ ಆ ಕಾಮ

ಗಾರೀಗಳನ್ನು ಸಾಧ್ಯವಾದಷ್ಟು ತ್ವರೆಯಲ್ಲಿ ಪೂರೈಸಿ ಆ ಮೇರೆ ಅಗಿಸಲ್ಪಟ್ಟ ಯಾ ಒಡೆಯಿಸಲ್ಪಟ್ಟ ಭೂಮಿಯನ್ನು ಭರ್ತೀ ಮಾಡಿಸಿ ತಳವರಸೆಯನ್ನು ಮೇಲ್ಭಾಗವನ್ನು, ಬಚ್ಚಲನ್ನು, ಯಾ ಚರಂಡಿಯನ್ನು ಸರಿಮಾಡಿಸಿ ಅದರಲ್ಲಿ ಬೀಳುವ ಮಣ್ಣನ್ನು ತೆಗೆಸಿ ಹಾಕತಕ್ಕದ್ದು. ಮತ್ತು ಈ ಮಧ್ಯಕಾಲದಲ್ಲಿ ಅಂತಾ ತಳವರಸೆಯ ಮೇಲ್ಭಾಗವು ಆ ಮೇರೆ ಅಗಿಸಲ್ಪಟ್ಟ, ಯಾ ಒಡೆಯಿಸಲ್ಪಟ್ಟ ಸ್ಥಳಕ್ಕೆ ಕಟಕಟೆ ಕಟ್ಟಿಸಿ ಕಾವಲು ಇಡಿಸಿ ರಾತ್ರೇ ಹೊತ್ತು ಸಾಕಾದಷ್ಟು ಬೆಳಕು ಇಡಿಸತಕ್ಕದ್ದು.

84. ಮೆಂಬರುಗಳ ಅಧಿಕಾರದಲ್ಲಿರೋಣಾದ ಬೀದಿಗಳು, ಬಚ್ಚಲು, ಯಾ ಚರಂಡೀಗಳು, ಇಂತಾವುಗಳ ಪೈಕೀ ಯಾವದನ್ನಾಗಲಿ ತಾವು ಕಟ್ಟಿಸುತ್ತಿರುವಲ್ಲಿ ಯಾ ರೀಪೇರ ಮಾಡಿಸುತ್ತಿರುವಲ್ಲಿ, ನೆರೆ ಹೊರೆ ಮನೆಗಳಿಗೆ ಅಪಾಯ ಬಾರದಂತೆ ಪೋಟೇಕೊಟ್ಟು ಬಂದೋಬಸ್ತು ಪಡಿಸಿ ತಕ್ಕ ಜಾಗ್ರತೆ ಉಂಟಾಗಿರತಕ್ಕದ್ದಲ್ಲದೆ ಯಾವ ಬೀದಿಯಲ್ಲಾಗಲಿ; ಬೀದಿಗೆ ಅಡ್ಡವಾಗಿಯಾಗಲಿ, ಅಂಥಾ ಕಾಮುಗಾರೀ ನಡೆಯುತ್ತಿರುವಲ್ಲಿ ಸವಾರೀಗಳು, ಬಂಡಿಗಳು, ಇತರ ಯಾನಗಳು, ದನಗಳು, ಯಾ ಕುದುರೆ ಇವುಗಳು ಹೋಗುವ ಮಾರ್ಗವನ್ನು ಅಟಕಾವು ಮಾಡಲಿಕ್ಕೆ ಪ್ರೆಸೀಡೆಂಟರು ತಮಗೆ ಯುಕ್ತತೋರುವ ಅಡ್ಡ ಕಟ್ಟಿಗೆಗಳು, ಸರಪಣಿಗಳು, ಯಾ ಕಂಭಗಳು, ಇಂತಾವನ್ನು ಅಡ್ಡವಾಗಿ ಕಟ್ಟಿಸುವಂತೆ ಮಾಡತಕ್ಕದ್ದು. ಮತ್ತು ಪ್ರೆಸೀಡೆಂಟರು ಬೀದಿಗಳಲ್ಲಿರುವ ಯಾವದಾದರೂ ಬಚ್ಚಲು ಯಾ ಚರಂಡಿ ಯಾ ಇತರ ಕೆಲಸಗಳು ಇವುಗಳನ್ನು ಕಟ್ಟಿಸುತ್ತಿರುವಲ್ಲಿ ಯಾ ರಿಪೇರ ಮಾಡುತ್ತಿರುವಲ್ಲಿ ಅವುಗಳ ಬಳಿ ರಾತ್ರೇಹೊತ್ತು ಸಾಕಾದಷ್ಟು ದೀಪಗಳು ಇಡಿಸುವಂತೆ ಮಾಡತಕ್ಕದ್ದಲ್ಲದೆ ಅವುಗಳ ಬಳೀ ಕಾವಲು ಇಡಿಸತಕ್ಕದ್ದು ಮತ್ತು ಪ್ರೆಸೀಡೆಂಟರ ಅಧಿಕಾರವನ್ನಾಗಲಿ ಸಮ್ಮತಿಯನ್ನಾಗಲಿ ಪಡೆಯದೆ ಸದರೀ ಅಡ್ಡಕಟ್ಟಿಗೆಗಳು ಸರಪಣಿಗಳು, ಯಾ ಕಂಭಗಳು, ಇವುಗಳ ಪೈಕೀ ಯಾವದನ್ನಾಗಲಿ, ತೆಗೆಯುವ, ಬದಲಾಯಿಸುವ, ಯಾ ಮತ್ತೊಂದು ಸ್ಥಳಕ್ಕೆ ತೆಗದುಕೊಂಡು ಹೋಗುವ ಯಾವದಾದರೂ ದೀಪವನ್ನು ಆರಿಸಿಬಿಡುವ, ಯಾವ ಮನುಷ್ಯನಾಗಲಿ 50 ರೂಪಾಯಿಗೆ ಮೀರದ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

85. ಪ್ರೆಸೀಡೆಂಟರ ಅಪ್ಪಣೇ ಇಲ್ಲದೆ ಯಾವ ಮನುಷ್ಯನೂ, ಯಾವ ಬೀದಿಯಲ್ಲಿಯೂ ಯಾವ ಕಟ್ಟಡದ ಸಾಮಾನುಗಳನ್ನೂ ಇಡಕೂಡದು, ಅಥವಾ ಹಳ್ಳ ತೆಗೆಯಲೂ ಕೂಡದು, ಮತ್ತು ಯಾವ ಮನುಷ್ಯನಿಗಾಗಲಿ ಅಂತಾ ಅಪ್ಪಣೆ ಕೊಡಲ್ಪಟ್ಟ ಪಕ್ಷಕ್ಕೆ, ಅವನು, ಆ ಸಾಮಾನುಗಳು ಆಚೆಗೆ ಸಾಗಿಸಲ್ಪಡುವ ಪರ್ಯಂತ ಯಾ ಹಳ್ಳ ಮುಚ್ಚಿಸಲ್ಪಡುವ ಪರ್ಯಂತ, ಅನ್ಯಥಾ ಬಂದೋಬಸ್ತು ಮಾಡಲ್ಪಡುವ ಪರ್ಯಂತ, ಆ ಮನುಷ್ಯನು ತನ್ನ ಸ್ವಂತ ಲಾಗವಡಿನಿಂದಲೇ ಅಂತಾ ಸಾಮಾನುಗಳಿಗೆ, ಯಾ ಹಳ್ಳಗಳಿಗೆ, ಸಾಕಾಗಿರುವ ಮೇರೆ ತಡೆಹಾಕಿಸುವಂತೆಯೂ, ಆವರಣ ಕಟ್ಟಿಸುವಂತೆಯೂ, ಮಾಡತಕ್ಕದಲ್ಲದೇ ರಾತ್ರಿ ಹೊತ್ತು ಅದರಬಳಿ ಸಾಕಾದಷ್ಟು ದೀಪಗಳು ಇಡುವಂತೆಯೂ ಮಾಡತಕ್ಕದ್ದು; ಮತ್ತು ಅಂತಾ ಅಪ್ಪಣೆ ಇಲ್ಲದೇ ಯಾವನು ಸಾಮಾನುಗಳನ್ನು ಇಡುತ್ತಾನೋ ಅಥವಾ ಹಳ್ಳ ತೆಗಿಯುತ್ತಾನೋ, ಅಥವಾ ಅಂತಾ ಸಾಮಾನುಗಳು, ಹಳ್ಳಗಳು ಇರುವ ಸ್ಥಳದಲ್ಲಿ ತಡೆಕಟ್ಟಿಸದೇಯಾಗಲಿ, ಆವರಣ ಕಲ್ಪಿಸದೇಯಾಗಲಿ ದೀಪ ಹಚ್ಚದೇಯಾಗಲಿತಪ್ಪುತ್ತಾನೋ ಅಥವಾ ಕೊಡಲ್ಪಟ್ಟ ಅಪ್ಪಣೆಯನ್ನು ಹಿಂದಿರಿಗಿಸಿಕೊಂಡಾಗ ಅಂತಾ ಸಾಮಾನುಗಳನ್ನು ಮತ್ತೊಂದು ಸ್ಥಳಕ್ಕೆ ಸಾಗಿಸದೇಯಾಗಲಿ ಅಂತಾ ಹಳ್ಳವನ್ನು ಮುಚ್ಚಿಸದೇಯಾಗಲಿ, ಇರುತ್ತಾನೋ ಅಂತಾ ಯಾವ ಮನುಷ್ಯನಾದರೂ 2 ಆಣೆಗಳ ಮೊದಲು 5 ರೂಪಾಯಿಗಳವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದಲ್ಲದೆ ಪ್ರೆಸೀಡೆಂಟರು ನೋಟಿಸ್ ಕೊಟ್ಟ 24 ಗಂಟೆಯ ಹೊತ್ತಿಗೆ ತರುವಾಯ ಆ ತಕಸೀರ ನಡಿಸುತ್ತಿರುವ ಪ್ರತಿ ದಿನಕ್ಕೂ 10 ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು.

86. ಸರ್ಕಾರ ಜಮೀನಲ್ಲಾಗಲಿ ಜನಗಳ ಸ್ವಂತ ಜಮೀನಲ್ಲಾಗಲಿ ಇರುವ ಯಾವದಾದರೂ ಕಟ್ಟ, ಕೆರೆ, ಬಾವಿ, ಯಾ ಹಳ್ಳ, ಯಾ ಇತರ ಪ್ರದೇಶ ಸಾಕಾದಷ್ಟು ರಿಪೇರಿ ಯಾ ಬಂದೋಬಸ್ತು, ಯಾ ಆವರಣ, ಇಂತಾದ್ದು ಇಲ್ಲದೇ ಇರುವದರಿಂದ ಜನಗಳಿಗೆ ಅಪಾಯಕರವಾಗಿ ಇದ್ದಪಕ್ಷಕ್ಕೆ ಪ್ರೆಸೀಡೆಂಟರು ಲಿಖಿತ ರೂಪವಾದ ನೋಟಿಸ್ ದ್ವಾರಾ, ಅದರ ದೆಸೆಯಿಂದ ಅಪಾಯವುಂಟಾಗದೇ ಇರುವಂತೆ ಅದು ರಿಪೇರ್ಮಾಡಲ್ಪಡತಕ್ಕದ್ದೆಂತಲಾಗಲಿ, ಬಂದೋಬಸ್ತು ಮಾಡಲ್ಪಡತಕ್ಕದ್ದೆಂತಲಾಗಲಿ, ಆವರಣ ಕಟ್ಟಿಸಲ್ಪಡತಕ್ಕದೆಂತಲಾಗಲಿ, ಸದರೀ ನಿವೇಶನಗಳ ಮಾಲೀಕನಿಗಾದರೂ, ಅನುಭವದಾರನಿಗಾದರೂ, ತಾಕೀತ ಮಾಡುವದು ಅವನಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಆ ಮನುಷ್ಯನು ಇಪ್ಪತ್ತುನಾಲ್ಕು ಗಂಟೆಯ ಹೊತ್ತಿನೊಳಗೆ ಸದರೀ ತಾಕೀತ ಮಾಡಲ್ಪಟ್ಟ ಪ್ರಕಾರ ನಡಿಸದೇ ನಿರಾಕರಿಸಿದ ಪಕ್ಷಕ್ಕೆ, ಅಥವಾ ಉಪೇಕ್ಷಿಸಿದರೆ, ಅಥವಾ ತಕ್ಕ ಜಾಗ್ರತೆಯಿಂದ ಪೂರೈಸಲಿಕ್ಕೆ ತಪ್ಪಿ ಹೋದರೆ ಆ ಮನುಷ್ಯನು ಪ್ರತಿ ತಪ್ಪಿತಕ್ಕೂ 2 ಆಣೆಗಳ ಮೊದಲು 5 ರೂಪಾಯಿಗಳ ವರಿಗೆ, ಒಂದು ಜುರ್ಮಾನೆಗೆ ಗುರಿಯಾಗತಕ್ಕದಲ್ಲದೆ ಆ ಪ್ರಕಾರ ಮಾಡಲಿಕ್ಕೆ ದೇರ ಮಾಡುವ ಪ್ರತಿ ದಿನಕ್ಕೂ 10 ರೂಪಾಯಿಗೆ ಮೀರದ ಒಂದು ಜಾಸ್ತೀ ಜುರ್ಮಾನೆಗೂ ಗುರಿಯಾಗತಕ್ಕದ್ದು. ಮತ್ತು ಸದರೀ ಕಟ್ಟ, ವಗೈರೇಗೆ ರಿಪೇರೀ ಯಾ ಬಂದೋಬಸ್ತು ಮಾಡಲ್ಪಡುವಂತೆ ಯಾ, ಆವರಣ ಕಲ್ಪಿಸಲ್ಪಡುವಂತೆ ಮಾಡುವದು, ಮೇಲೆ ಕಂಡ ದರೋಬಸ್ತು ಅಥವಾ ಯಾವದಾದರೂ ಕೆಲಸಗಳಿಗಾಗಿ ತಮಗೆ ಯುಕ್ತತೋರುವ ಪ್ರಕಾರ ಜರೂರಾದ ದರೋಬಸ್ತು ಅಂಶಗಳನ್ನೂ ಮಾಡುವದು ಪ್ರಸೀಡೆಂಟರಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಆ ಬಗ್ಯೆ ಹಿಡಿದ ಲಾಗವಡು ಯಿದರಲ್ಲಿ ಮುಂದೆ ವಿಧಿಸಲ್ಪಡುವಪ್ರಕಾರ ವಸೂಲಾಗತಕ್ಕದ್ದು.

87. ಮೆಂಬರಗಳಾಗಲಿ, ಅವರಿಂದ ಸದರೀ ಬಗ್ಯೆ ಮೊಕರರ್ ಮಾಡಲ್ಪಟ್ಟ ಯಾವ ಮನುಷ್ಯನಾಗಲಿ ಯಾವದಾದರೂ ಮಾರ್ಕೆಟ್, ಕಟ್ಟೆ, ಅಂಗಡಿ, ತಟ್ಟೀ ಅಂಗಡಿ, ಅಥವಾ ಖಸ್ಯೆ ಮಾಂಸ, ಕೋಳಿಗಳು, ಮೀನುಗಳು, ಹಣ್ಣುಗಳು, ಯಾ ತರ್ಕಾರಿಗಳು, ಯಿಂತಾವುಗಳನ್ನು ವಿಕ್ರಯಿಸುವ ಬಗ್ಯೆ ಯಾ ಖಸ್ಯೆ ಮನೆ ಬಗ್ಯೆ ಉಪಯೋಗಿಸಲ್ಪಡುವ ಸ್ಥಳ ಯಿವುಗಳಲ್ಲಿ ನ್ಯಾಯವಾದ ಯೆಲ್ಲಾ ಕಾಲಗಳೊಳಗೂ ಕುಮ್ಮಕ್ದಾರ್ ಸಂಗಡಲೀ ಯಾಗಲಿ, ಅವರುಗಳು ಯಿಲ್ಲದೆಯಾಗಲಿ ಪ್ರವೇಶಿಸಿ ತನಖೀ ಮಾಡುವದು ಮಾತ್ರವಲ್ಲದೆ ಅದರಲ್ಲಿ ಯಿರಬಹುದಾದ ಯಾವಾದರೂ ಜಂತು, ಮುರ್ದಾರ್, ಮಾಸ, ಯಾವದಾದರೂ ಕೋಳಿಗಳ, ಜೇಟಿ ಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು, ಯಾ ತರಕಾರಿಗಳು ಇವು ಮನುಷ್ಯಾ ಹಾರಕ್ಕೋಸ್ಕರ ಉದ್ದೇಶಲ್ಪಟ್ಟವಾಗಿಯೂ, ಅಂತಾ ಆಹಾರಕ್ಕೆ ಅಯೋಗ್ಯವಾಗಿಯೂ, ಕಾಣಬರುವ ಸಂಗತಿಯಲ್ಲಿ ಅವುಗಳನ್ನು ಹಿಡಿದುಕೊಂಡು ಅವುಗಳನ್ನು ನಾಶ ಮಾಡಿ ಬಿಡುವಂತೆಯಾಗಲಿ ವಿಕ್ರಯಿಸುವ ಬಗ್ಯೆ ಕಾಣಿಸನಂತೆ ಯಾಗಲಿ, ಆಹಾರದ ಬಗ್ಯೆ ಉಪಯೋಗಿಸಲ್ಪಡದಂತೆ ಯಾಗಲಿ ವಿನಿಯೋಗಿಸಿ ಬಿಡುವಂತೆ ಹುಕ್ಕುಂ ಮಾಡಬಹುದು, ಮತ್ತು ಯುಕ್ತವಾದ ಮನುಷ್ಯನ ಸಾಕ್ಷ್ಯದ ಮೇಲೆ, ಅಂತಾ ಜಂತುವು, ಮುರ್ದಾರ್, ಮಾಂಸ, ಕೋಳಿಗಳು, ಜೇಟಿ ಮಾಂಸ, (ಸಾಧಾರಣ) ಮಾಂಸ, ಮೀನುಗಳು, ಹಣ್ಣುಗಳು, ಯಾ ತರ್ಕಾರಿಗಳು, ಯಿವು ಮನುಷ್ಯನ ಆಹಾರಕ್ಕೆ ಅಯೋಗ್ಯವಾಗಿ ಯಿತ್ತೆಂತ ಬಬ್ಬ ಮಾಜಿಸ್ಟ್ರೇಟರಿಗೆ ಕಾಣಬಂದ ಪಕ್ಷಕ್ಕೆ, ಅವುಗಳ ಮಾಲೀಕನಾಗಲಿ, ಅವು ಯಾರ ಸ್ವಾಧೀನದಲ್ಲಿ ಕಾಣಬಂದವೋ ಅಂತಾ ಮನುಷ್ಯನಾಗಲಿ, ಇಂಡ್ಯನ್ ಪೆನಲ್‌ಕೋಡಿನ 273ನೇ ಸೆಕ್ಷನ್ನಿಂದ ವಿಧಿಸಲ್ಪಟ್ಟ 5 ರೂಪಾಯಿಗಳ ಮೊದಲು 10 ರೂಪಾಯಿಗಳ ವರಿಗೆ ಒಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

ಆ ಮೇರೆ ನಾಶ ಮಾಡಲ್ಪಟ್ಟ ವಸ್ತುಗಳು ಮನುಷ್ಯಾಹಾರಕ್ಕೆ ಯೋಗ್ಯವಾಗಿತ್ತೆಂತ ಮಾಜಿಸ್ಟ್ರೇಟರು ಅಭಿಪ್ರಾಯ ಪಟ್ಟ ಪಕ್ಷಕ್ಕೆ ಸದರೀ ವಸ್ತುವಿನ ನ್ಯಾಯವಾದ ಕಿಮ್ಮತ್ತು ಯೆಂತ ಮಾಜಿಸ್ಟ್ರೇಟರಿಗೆ ತೋರುವ ಮೊಬಲಗನ್ನು ಸದರೀ ಮಾಲೀಕನಿಗೆ ಸಲ್ಲಿಸುವಂತೆ ಮೆಂಬರಗಳಿಗೆ ಹುಕ್ಕುಂ ಮಾಡತಕ್ಕದ್ದು.

88. ಈ ಬೈಲಾ ನಿಬಂಧನೆಗಳು ಜಾರೀಲಿ ಬರುವ ಕಾಲದಲ್ಲಿ ಮಡಿಕೆರೆ ಲಷ್ಕರ್ ವ ಷಹರ್ ಸರಹದ್ದುಗಳೊಳಗೆ ಈ ಕೆಳಗೆ ಕಾಣಿಸಲ್ಪಡುವ ಕಾರ್ಯಗಳ ಪೈಕೀ ಯಾವ ಕಾರ್ಯಗಳಿಗೋಸ್ಕರವಾಗಲಿ ಅಂದರೆ, ಕೊಬ್ಬು ಕರಗಿಸುವದು, ಸತ್ತ ಜಂತುವಿನ ಕರಳು ಮುಂತಾದ ಮಾಂಸ, ರಕ್ತ ಯಿಂತಾದ್ದನ್ನು ಕಾಯಿಸುವದು, ಈ ಬಗ್ಗಾಗಲಿ, ಸಬ್ಬು, ಕರ್ಪೂರ, ಯೆಣ್ಣೆ, ಯಿಂತಾದ್ದನ್ನು ಕಾಯಿಸುವ ಮನೆಯಾಗಿ, ಗಾಣಿಗೆ, ಯಾ ಯೆಣ್ಣೆ ತೆಗೆಯುವ ಯಂತ್ರವಾಗಿ, ರಂಗಾರಿ ಮನೆಯಾಗಿ, ಯಾ ಅಂಗಳವಾಗಿ, ತೊಗಲು ಹದ ಮಾಡುವ ಸ್ಥಳವಾಗಿ, ಇಟ್ಟಿಗೆ ಯಾ ಕುಂಬಾರ ಸೂಳಾಗಿ, ಯಾ ಸುಣ್ಣದ ಗೂಡಾಗಿ, ಕಾಗದ ಕಾರ್ಖಾನೆಯಾಗಿ ಅಸಹ್ಯಕರವಾದ ಮತ್ತು ಅನಾರೋಗ್ಯಕರವಾದ ಯಾವದಾದರೂ ಕಂಪುಳ್ಳ ಯಾವದಾದರೂ ಕೆಲಸ ನಡೆಯುವ ಕಾರ್ಖಾನೆಯಾಗಿ ಯಾ ಕೆಲಸ ಮಾಡುವ ಸ್ಥಳವಾಗಿ; ಅಥವಾ ಮೋಣ್ಯಕ್ಕೆ, ಹುಲ್ಲು, ಮರದ ಸಾಮಾನುಗಳು, ಸಾದೆ, ಕರಿ, ಯಾ ಬೆರಣೀವಗ್ಯೆರೆ ಯಿಂತಾದ್ದನ್ನು ಇಡುವ ದೊಡ್ಡಿ, ಯಾ ಕೋಠೀಯಾಗಿ ಉಪಯೋಗಿಸಿಕೊಳ್ಳಲ್ಪಟ್ಟ ಪ್ರತಿ ಸ್ಥಳದ ಮಾಲೀಕ ಯಾ ಅನುಭವದಾರನು, ಅವು ವಿಕ್ರಯದ ಬಗ್ಯೆ ಇಟ್ಟುಕೊಳ್ಳಲ್ಪಟ್ಟದ್ದಾಗ್ಯೂ ಸರಿ, ಮತ್ತೊಂದು ಕಾರ್ಯಕ್ಕಾಗಿ ಇಟ್ಟುಕೊಳ್ಳಲ್ಪಟ್ಟದ್ದಾಗ್ಯೂ ಸರಿ, ಈ ಬೈಲಾನಿಬಂಧನೆಗಳು ಜಾರೀಯಲ್ಲಿ ಬಂದ ತರುವಾಯ ಮೂರುತಿಂಗಳೊಳಗಾಗಿ ಆಬಗ್ಯೆ ಮೆಂಬರಗಳ ದೆಸೆಯಿಂದ ಇಡಲ್ಪಡತಕ್ಕ ಒಂದು ಪುಸ್ತಕದಲ್ಲಿ ಅವರ ಆಫೀಸನಲ್ಲಿ ರಿಜಿಸ್ಟರ್ ಮಾಡಿಸತಕ್ಕದ್ದು. ಮತ್ತು ಸದರೀ ಮೂರುತಿಂಗಳು ಕಳೆದ ತರುವಾಯ ಪ್ರೆಸಿಡೆಂಟರು ನೋಟಿಸ ಕೊಟ್ಟ ಯೆಂಟು ದಿನಗಳಿಗೆ ತರುವಾಯ ಯಾರಾದರೂ, ಅಂತಾ ಯಾವ ಸ್ಥಳವನ್ನಾಗಲಿ ರಿಜಿಸ್ಟರ್ ಮಾಡಿಸಿಕೊಳ್ಳದೆ ಉಪಯೋಗಿಸಿಕೊಂಡಲ್ಲಿ ಆ ತಕಸೀರ್ ನಡಿಸಲ್ಪಡುತ್ತಾ ಇರುವ ಪ್ರತಿದಿನಕ್ಕೂ 2 ಆಣೆ ಮೊದಲು, 5 ರೂಪಾಯಿಗಳವರಿಗೆ, ವೊಂದು ಜುರ್ಮಾನೆಗೆ ಗುರಿಯಾಗತಕ್ಕದ್ದು.

89. ಪರಂತು ಯಿದರಲ್ಲಿ ವಿಧಿಸಲ್ಪಟ್ಟ ಯಾ ಇದರಿಂದ ವಿಧಿಸಲ್ಪಡತಕ್ಕ ಬೈಲಾ ನಿಬಂಧನೆಗಳ ಪೈಕೀ ಯಾವದಾಗಲಿ, ಮಡಿಕೆರೆಯಲ್ಲಿ ಯಾವ ಬಗೆ ಜನಗಳಿಗಾಗಲಿ ಯಾವ ವ್ಯಕ್ತಿಗಾಗಲಿ, ಬಹಳ ಕಠಿಣವಾಗಿ ಕಾಣಬಂದ ಪಕ್ಷಕ್ಕೆ ಆಗ ಈ ಬೈಲಾನಿಬಂಧನೆಗಳು, ಚೀಫ್ ಕಮ್ಮಿಷನರವರ ಅನುಮತಿಯ ಮೇಲೆ ಬೋರ್ಡಿನವರ ಪೂರ್ಣವಾದ ಸಮಾಜದೊಳಗೆ ಯುಕ್ತ ತೋರುವ ಪ್ರಕಾರ ಯಾವಾಗ್ಯೂ ರದ್ದು ಮಾಡಲ್ಪಡಬಹುದು, ಪರಿಷ್ಕರಿಸಲ್ಪಡ ಬಹುದು, ಯಾ ತಿದ್ದುಪಡೀ ಮಾಡಲ್ಪಡಬಹುದು.

90. ಮತ್ತು ಕಾಫೀಸಾಗುವಳಿಯು ಜನಗಳ ಆರೋಗ್ಯ ಭಂಗಕಾರಿಯಾಗಿರುವದರಿಂದ ಅದನ್ನು ಪೇಟೇಯೊಳಗೆ ಮತ್ತು ರೋಮನ್ ಕ್ಯಾಥೋಲಿಕ್ ಗುಡಿಮನೆಗೆ ಕಾಫೀಗಿಡ ಹಾಕುವಣ ನಿರೋಧಿಸಲ್ಪಡತಕ್ಕದ್ದು.

"ಬಮೋಜೀಬ್ ಹುಕ್ಕುಂ,"

T. CLARKE,
*Offg. Secretary.*